بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 32

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

11 ಆಗಸ್ಟ್ 2022, 11 ಸಫರ್ 1401 ಹಿಜರಿ ಶಮ್‌ಸಿ,
12 ಮುಹರ್ರಮ್ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ.

## ಅಲ್ಲಾಹನ ಉಪದೇಶ

رَبَّنَا لَا تَجْعَلْنَا فِتْنَةً لِّلَّذِيْنَ كَفَرُوْا
وَاغْفِرْ لَنَا رَبَّنَا ۚ
اِنَّكَ اَنْتَ الْعَزِيْزُ الْحَكِيْمُ ۝٦

**(ಅಲ್ ಮುಮ್‌ತಹಿನ : 06)**

**ಅಂದರೆ: 'ನಮ್ಮ ಪ್ರಭೂ, (ಸತ್ಯವನ್ನು) ನಿರಾಕರಿಸುವವರಿಗೆ ನೀನು ನಮ್ಮನ್ನು ಪರೀಕ್ಷಾ ಸಾಧನವನ್ನಾಗಿ ಮಾಡಬೇಡ. ನಮ್ಮನ್ನು ಕ್ಷಮಿಸಿಬಿಡು. ನಮ್ಮ ಪ್ರಭೂ, ನೀನು ಪ್ರತಾಪಶಾಲಿಯೂ ವಿವೇಕವಂತನೂ ಆಗಿರುವೆ.'**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ರಿಝ್ಖ್‌ನಲ್ಲಿ (ಜೀವನಾಂಶದಲ್ಲಿ) ಸಮೃದ್ಧಿ ಹಾಗೂ ದೀರ್ಘಾಯುಷ್ಯಕ್ಕಾಗಿ ಒಂದು ಪಾಕವಿಧಾನ

(2067) ಹಝ್ರತ್ ಅನಸ್ ಬಿನ್ ಮಲಿಕ್(ರ) ಅವರು ವರದಿ ಮಾಡುತ್ತಾರೆ: ಪ್ರವಾದಿ ಮುಹಮ್ಮದ್(ಸ) ರವರು ಹೇಳುವುದನ್ನು ನಾನು ಕೇಳಿದೆ: ತನ್ನ ಜೀವನಾಂಶವನ್ನು ಹೆಚ್ಚಿಸಲು ಇಷ್ಟಪಡುವವನು (ಮತ್ತು ಒಳ್ಳೆಯ ಕಾರ್ಯಗಳಿಗೆ ಹೆಚ್ಚಿನ ಅವಕಾಶಗಳನ್ನು ಹೊಂದಲು) ಮತ್ತು ದೀರ್ಘಾಯುಷ್ಯವನ್ನು ಹೊಂದಬೇಕಾದರೆ ಅವನು ಕರುಣಾಮಯಿಯಾಗಬೇಕು.

### ಸರಣಿ ಸರಕುಗಳೊಂದಿಗೆ ವ್ಯಾಪಾರ ಮಾಡಿ

(2070) ಹಝ್ರತ್ ಆಯಿಷಾ(ರ) ಹೇಳಿದರು: ಹಝ್ರತ್ ಅಬುಬಕರ್ ಸಿದ್ದೀಕ್(ರ) ಖಲೀಫರಾದಾಗ, ಅವರು ಹೇಳಿದರು: ನನ್ನ ವೃತ್ತಿಯು ನನ್ನ ಕುಟುಂಬಕ್ಕೆ ಆಹಾರವನ್ನು ನೀಡಲು ಸಾಧ್ಯವಾಗದಂತಹದ್ದಲ್ಲ ಎಂದು ನನ್ನ ಜನರಿಗೆ ತಿಳಿದಿದೆ. ಆದರೆ ಈಗ ನಾನು ಮುಸ್ಲಿಮರ ಕೆಲಸದಲ್ಲಿ ತೊಡಗಿಸಿಕೊಂಡಿದ್ದೇನೆ, ಆದ್ದರಿಂದ ಅಬೂಬಕರ್ ಅವರ ಕುಟುಂಬವು ಈಗ ಬೈತುಲ್ಮಾಲ್‌ನಿಂದ (ಖಜಾನೆಯಿಂದ) ತಿನ್ನುತ್ತದೆ ಮತ್ತು ಅವರು (ಅಬೂಬಕರ್) ಈ ಸಂಪತ್ತನ್ನು ಮುಸ್ಲಿಮರಿಗೆ ವ್ಯಾಪಾರ ಮಾಡುತ್ತಾರೆ (ಮತ್ತು ವ್ಯಾಪಾರದ ಮೂಲಕ ಅವರ ಸಂಪತ್ತನ್ನು ಹೆಚ್ಚಿಸುತ್ತಾರೆ).

### ಸಹಾಬರವರು ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುತ್ತಿದ್ದರು

(2071) ಹಝ್ರತ್ ಆಯಿಷಾ(ರ) ಅವರು ಪೈಗಂಬರ್(ಸ) ಅವರ ಸಹಚರರು ತಮ್ಮ ಕೆಲಸವನ್ನು ಸ್ವತಃ ಮಾಡುತ್ತಿದ್ದರು ಮತ್ತು ಅವರು ಬೆವರಿನ ವಾಸನೆಯನ್ನು ಹೊಂದಿದ್ದರು ಎಂದು ಹೇಳುತ್ತಿದ್ದರು, ಆದ್ದರಿಂದ ಅವರಿಗೆ ಹೇಳಲಾಯಿತು: ನೀವು ಸ್ನಾನ ಮಾಡಿದರೆ ಅದು ನಿಮಗೆ ಉತ್ತಮವಾಗಿರುವುದು. (ಬುಖಾರಿ, **ಸಂಪುಟ-4, ಕಿತಾಬ್ ಅಲ್-ಬಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

**ಪ್ರತಿಯೊಂದು ವಿಷಯವನ್ನು ಹೇಳುವ ಮೊದಲು ಅದರ ಫಲಿತಾಂಶ ಏನಾಗಬಹುದು ಎಂದು ಯೋಚಿಸಿಕೊಳ್ಳಿ, ಅದನ್ನು ಹೇಳಲು ಸರ್ವಶಕ್ತನಾದ ಅಲ್ಲಾಹನ ಅನುಮತಿ ಇದೆಯೇ ಎಂದು ಯೋಚಿಸಿ**
**ಇದನ್ನು ಯೋಚಿಸುವವರೆಗೆ ಮಾತನಾಡಬೇಡಿ, ಕಿಡಿಗೇಡಿತನ ಮತ್ತು ಪಿತೂರಿತನವನ್ನು ಉಂಟುಮಾಡುವ ಮಾತನ್ನು ಆಡುವುದಕ್ಕಿಂತ ಮಾತನಾಡದಿರುವುದು ಉತ್ತಮವಾಗಿದೆ.**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಒಬ್ಬ ವ್ಯಕ್ತಿಯು ತನ್ನ ನಾಲಿಗೆಯಿಂದಾಗಿ ಧರ್ಮನಿಷ್ಠೆಯಿಂದ ದೂರ ಹೋಗುತ್ತಾನೆ. ಅವನು ತನ್ನ ನಾಲಿಗೆಯಿಂದ ಅಹಂಕಾರಿಯಾಗುತ್ತಾನೆ ಮತ್ತು ಅವನ ನಾಲಿಗೆಯಿಂದಾಗಿ ಫಿರ್‌ಔನ್‌ನ ಗುಣಲಕ್ಷಣಗಳು ಬರುತ್ತವೆ ಮತ್ತು ಈ ನಾಲಿಗೆಯಿಂದಾಗಿ ಅವನು ಗುಪ್ತ ಕ್ರಿಯೆಗಳನ್ನು ಬೂಟಾಟಿಕೆಯಿಂದ ಬದಲಾಯಿಸುತ್ತಾನೆ ಮತ್ತು ಅವನ ನಾಲಿಗೆಗೆ ಹಾನಿಯು ಬೇಗನೆ ತಟ್ಟುತ್ತದೆ. ಹದೀಸಿನಲ್ಲಿ ಉಲ್ಲೇಖಿಸಲಾಗಿರುವುದೇನೆಂದರೆ ಯಾರು ದೇಹದ ಕೆಳಗಿನ ಭಾಗ ಹಾಗೂ ನಾಲಿಗೆಯನ್ನು ದುಷ್ಟತೆಯಿಂದ ರಕ್ಷಿಸಿಕೊಳ್ಳುತ್ತಾನೊ ಅಂತಹ ವ್ಯಕ್ತಿಯ ಸ್ವರ್ಗಕ್ಕೆ ನಾನೇ (ಅಲ್ಲಾಹನೇ) ಜವಾಬ್ದಾರನಾಗಿರುತ್ತೇನೆ. ಹರಾಮ್ ಆಹಾರವು ಸುಳ್ಳು ಮಾತಿನಷ್ಟು ಹಾನಿ ಉಂಟು ಮಾಡುವುದಿಲ್ಲ. ಇದರಿಂದ ಹರಾಮ್ ಆಹಾರ ಒಳ್ಳೆಯದು ಎಂದು ಯಾರೂ ಭಾವಿಸಬಾರದು. ಹಾಗೆ ಯಾರಾದರೂ ಯೋಚಿಸಿದರೆ ಇದು ಗಂಭೀರವಾದ ತಪ್ಪಾಗುವುದು. ನನ್ನ ಅಭಿಪ್ರಾಯದಲ್ಲಿ ಯಾರಾದರು ಬಹಳ ಕಠಿಣವಾದ ಪರಿಸ್ಥಿತಿಯಲ್ಲಿ ಹಂದಿಮಾಂಸ ತಿಂದರೆ ಅದು ಬೇರೆ ವಿಷಯವಾಗಿದೆ. ಆದರೆ ಆತನು ತನ್ನ ನಾಲಿಗೆಯಿಂದ ಹರಾಮ್ ಅನ್ನು ಕಾನೂನುಬದ್ಧ ಎಂದು ಹೇಳಿದರೆ ಆಗ ಅವನು ಇಸ್ಲಾಮಿನಿಂದ ದೂರವಾಗುತ್ತಾನೆ. ಅವನು ಅಲ್ಲಾಹನು ನಿಷಿದ್ಧಗೊಳಿಸಿದ್ದನ್ನು ಕಾನೂನುಬದ್ಧಗೊಳಿಸುತ್ತಿದ್ದಾನೆ. ಆದ್ದರಿಂದ, ನಾಲಿಗೆಯ ಹಾನಿಯು ಅಪಾಯಕಾರಿ ಎಂದು ತಿಳಿಯುತ್ತದೆ. ಆದುದರಿಂದಲೇ ಒಬ್ಬ ಮುತ್ತಖಿಯೂ (ಭಯಭಕ್ತಿವುಳ್ಳವನು) ತನ್ನ ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಂಡಿರುತ್ತಾನೆ. ಅವನ ಬಾಯಿಂದ ಧರ್ಮಾಚರಣೆಗೆ ವಿರುದ್ಧವಾದ ಯಾವುದೇ ಮಾತು ಹೊರ ಬರುವುದಿಲ್ಲ. ಹಾಗಾಗಿ ನೀವು ನಿಮ್ಮ ನಾಲಿಗೆಯನ್ನು ನಿಯಂತ್ರಣದಲ್ಲಿರಿಸಿರಿ ವಿನಃ ನಾಲಿಗೆಗಳು ನಿಮ್ಮನ್ನು ನಿಯಂತ್ರಣದಲ್ಲಿರಿಸಿ ಅನಾವಶ್ಯಕವಾಗಿ ಮಾತನಾಡಬಾರದು.

ಪ್ರತಿ ವಿಷಯವನ್ನು ಹೇಳುವ ಮೊದಲು ಅದರ ಪರಿಣಾಮ ಏನಾಗಬಹುದು ಎಂದು ಯೋಚಿಸಿ. ಅದನ್ನು ಹೇಳಲು ಅಲ್ಲಾಹನ ಅನುಮತಿ ಎಷ್ಟರಮಟ್ಟಿಗೆ ಇದೆ. ಆಲೋಚಿಸುವವರೆಗೆ ಮಾತನಾಡಬೇಡಿ. ಅಪಘಾತ ಉಂಟುಮಾಡುವ ರೀತಿಯಲ್ಲಿ ಮಾತನಾಡುವುದಕ್ಕಿಂತ ಮಾತನಾಡದಿರುವುದು ಉತ್ತಮ. ಆದರೆ ಸತ್ಯವನ್ನು ವ್ಯಕ್ತಪಡಿಸುವಲ್ಲಿ ಮೂಮಿನ್ ನಿಲ್ಲುವುದು ಅವರ ವೈಭವದಿಂದ ದೂರವಿದೆ. ಅಂತಹ ಸಂದರ್ಭದಲ್ಲಿ ನಿಂದಿಸುವವನ ನಿಂದನೆ ಹಾಗೂ ಭಯ ನಾಲಿಗೆಯನ್ನು ತಡೆಯಬಾರದು. ನೋಡಿ ನಮ್ಮ ಪ್ರವಾದಿ(ಸ) ಪ್ರವಾದಿತ್ವ ಘೋಷಿಸಿದಾಗ ಸುತ್ತಲಿದ್ದವರೆಲ್ಲ ಶತ್ರುಗಳಾದರು ಆದರೆ ಕ್ಷಣಕಾಲವೂ ಅವರು ಯಾರ ಬಗ್ಗೆಯೂ ತಲೆ ಕೆಡಿಸಿಕೊಳ್ಳಲಿಲ್ಲ ತಮ್ಮ ಚಿಕ್ಕಪ್ಪ ಅಬುತಾಲಿಬ್ ಅವರು ಜನರ ದೂರುಗಳಿಂದ ನಿಸ್ಸಹಾಯಕರಾಗಿ ಹೇಳಿದರು. ಆಗಲೂ ಅವರು ಸ್ಪಷ್ಟವಾಗಿ ಹೇಳಿದ್ದು ನಾನು ಅದನ್ನು ವ್ಯಕ್ತಪಡಿಸುವುದನ್ನು ನಿಲ್ಲಿಸಲಾರೆ ಅದು ನಮ್ಮ ಆಯ್ಕೆಯಾಗಿದೆ, ನೀವು ನನ್ನನ್ನು ಬೆಂಬಲಿಸಿ ಅಥವಾ ಬೆಂಬಲಿಸದಿರಿ. **(ಮಲ್‌ಫೂಝಾತ್, ಸಂಪುಟ-1, ಪುಟ-382 ಪ್ರಕಟಿತ ಖಾದಿಯಾನ್ 2018)**

**ನುಬುವ್ವತ್ ಇಲ್ಲದೆ (ಪ್ರವಾದಿತ್ವ) ಲೋಕವು ಎಂದೂ ತನ್ನ ಹಕ್ಕುಗಳನ್ನು ತಡೆಯಲಾರದು. ಈ ಅನುಗ್ರಹವು ಮತ್ತೆ ಮತ್ತೆ ಲೋಕಕ್ಕೆ ಲಭಿಸಲಿಲ್ಲ ಎಂದಾದರೆ ಮಾನವನ ಹೆಜ್ಜೆ ಪ್ರಗತಿಯ ಹಾದಿಯಲ್ಲಿ ಸಾಗದು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ಅನ್ನಹ್ಲ್ ವಚನ 72 **ವಲ್ಲಾಹು ಫಝ್ಝಲ ಬಅಝುಕುಮ್ ಅಲಾ ಬಅಝಿನ್ ಫಿರ್‍ರಿಝ್ಖಿ, ಫಮಲ್ಲಝೀನ ಫುಝ್ಝಿಲೂ ಬಿರಾದ್ದೀ ರಿಝ್ಖಿಹಿಮ್ ಅಲಾ ಮಾ ಮಲಕತ್ ಅಯ್‌ಮಾನುಹುಮ್ ಫಹುಮ್ ಫೀಹೀ ಸವಾಉನ್, ಅಫಬಿನಿಅ್‌ಮತಲ್ಲಾಹಿ ಯಜ್ಹದೂನ್** ರ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಯಾವ ಜನರ ಪ್ರಭುತ್ವ ದೇಶಗಳ ಮೇಲೆ ಮತ್ತು ಸರಕಾರಗಳ ಮೇಲೆ ಇರುತ್ತದೆ, ಅವರ ತಕರಾರು ಇರುವುದೇನೆಂದರೆ ಲೋಕದ ಆಡಳಿತ ವ್ಯವಸ್ಥೆ ಸಮರ್ಥ ಜನರ ಕೈಯಲ್ಲಿರಬೇಕು. ಮತ್ತು

*(ಪುಟ 09ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ಪೀರ್ ಮಹೆರ್ ಅಲಿ ಶಾ ಗೋಲ್ಡವಿ ಅವರಿಗೆ ಮತ್ತೊಂದು ವೈಭವಯುತ ಬಹುಮಾನದ ಪಂಥಾಹ್ವಾನ**
**ನನ್ನ ಎದುರಿನಲ್ಲಿ ತಫ್ಸೀರ್ ಬರೆದ ನಂತರ ನಿಮ್ಮ ತಫ್ಸೀರ್ ಉತ್ತಮ ಎಂದು ಸಾಬೀತಾದರೆ ಹಾಗೂ ನೀವು ನನ್ನ ತಫ್ಸೀರಿನಿಂದ ನ್ಯೂನತೆಗಳನ್ನು ಕಂಡುಹಿಡಿದರೆ ಪ್ರತಿಯೊಂದು ನ್ಯೂನತೆಗೆ ಐದು ರೂಪಾಯಿಯಂತೆ ಬಹುಮಾನ ನೀಡುವೆನು.**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಈ ವೈಭವಯುತ ಬಹುಮಾನದ ಸವಾಲು ನಾವು ಅವರ ಗ್ರಂಥ "ನುಝುಲುಲ್ ಮಸೀಹ್" ರೂಹಾನಿ ಖಝಾಯಿನ್ ಸಂಪುಟ 18 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಅದಕ್ಕಿಂತ ಮುಂಚೆ ನಾವು ವಿವರಿಸಿದ್ದು ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಅವರು, ಅಲ್ಲಾಹನಿಂದ ಸ್ಥಾಪಿಸಲ್ಪಟ್ಟ ಈ ಸಂಘಟನೆಯನ್ನು ಅಳಿಸಿ ಹಾಕಲು ಸನ್ನದ್ಧರಾಗಿದ್ದ ಪೀರ್ ಮೆಹರ್ ಅಲಿ ಶಾ ಗೋಲ್ಡವಿ ಅವರಿಗೆ ದಿನನಿತ್ಯದ ಜಗಳ ತೀರ್ಮಾನವಾಗಲು ಸವಾಲಿನ ಮೇಲೆ ಸವಾಲು ಹಾಕಿದೆ. ಏಕೆಂದರೆ ಜನರಿಗೆ ತಿಳಿಯುವಂತಾಗಲಿ. ದೇವನು ಯಾರೊಂದಿಗಿದ್ದಾನೆ ಎಂದು. ಆವರು ಸ್ಪರ್ಧೆಗೆ ಬರಲಿಲ್ಲ. ಅಂತಿಮ ಸವಾಲು ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಪೀರ್ ಮಹೆರ್ ಅಲಿ ಶಾ ಸಾಹಿಬ್‌ರವರಿಗೆ ಕೊಟ್ಟದ್ದು ಎಪ್ಪತ್ತು ದಿನಗಳವರೆಗೆ ನಾವಿಬ್ಬರು ಪೂರ್ಣ ಅರಬಿ ಭಾಷೆಯಲ್ಲಿ ಸೂರಃ ಫಾತಿಹದ ವ್ಯಾಖ್ಯಾನ (ತಫ್ಸೀರ್) ಬರೆದು ಪ್ರಟಿಸೋಣ ಎಂದಾಗಿತ್ತು. ಯಾವ ಪಕ್ಷದವರು ಎಪ್ಪತ್ತು ದಿನಗಳ ಒಳಗೆ ಸೂರಃ ಫಾತಿಹದ ವ್ಯಾಖ್ಯಾನ (ತಫ್ಸೀರ್) ಬರೆದು ಪ್ರಕಟಿಸುವುದಿಲ್ಲವೋ ಆಗ ಈ ಅವಧಿ ಕಳೆದು ಹೋಗುವುದು. ಮತ್ತು ಅವರನ್ನು ಸುಳ್ಳುಗಾರನೆಂದು ಭಾವಿಸಲಾಗುವುದು. ಅವರು(ಅ) ರವರು ಈ ಸವಾಲು ಜಾಹೀರಾತಿನ ಮೂಲಕ 15 ಡಿಸೆಂಬರ್ 1900 ರಂದು ನೀಡಿದ್ದರು. ಈ ರೀತಿ 23 ಫೆಬ್ರವರಿ 1901 ರಂದು ಎಪ್ಪತ್ತು ದಿನಗಳ ಅವಧಿ ಪೂರ್ಣಗೊಳ್ಳುತ್ತಿತ್ತು. ಆದರೆ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ತನ್ನ ಸವಾಲಿನ ಹಾಗೂ ವಾಗ್ದಾನ ಪ್ರಕಾರ ಅಲ್ಲಾಹನ ಅನುಗ್ರಹದಿಂದ "ಇಜಾಝುಲ್ ಮಸೀಹ್" ಹೆಸರಿನಿಂದ 23 ಫೆಬ್ರವರಿ 1901 ರಂದು ಅರಬಿ ಭಾಷೆಯಲ್ಲಿ ಸೂರಃ ಫಾತಿಹದ ತಫ್ಸೀರ್ ಬರೆದು ಪ್ರಕಟಿಸಿದರು. ಆದರೆ ಪೀರ್ ಮೆಹರ್ ಅಲಿ ಏನು ಸಹ ಬರೆದು ಪ್ರಕಟಿಸುವ ಭಾಗ್ಯ ದೊರೆಯಲಿಲ್ಲ. ಆ ಭಾಗ್ಯ ದೊರೆಯಲು ಸಾಧ್ಯವಾಗುವುದಾದರೂ ಹೇಗೆ, ಅವರು ಅಲ್ಲಾಹನ ಮಸೀಹ್ ಕುರಿತು ಹೇಳಿದರು. ಅವರು ಒಂದು ಸಾಲು ಸಹ, ಸರಳ ರೀತಿಯಲ್ಲಿ ಅರಬಿಯಲ್ಲಿ ಬರೆಯಲು ಆಗಲಿಲ್ಲ.

**ಮೆಹರ್ ಅಲಿ ಶಾ ಗೋಲ್ಡವಿ ಅವರ ಗ್ರಂಥ "ಸೈಫ್‌ಇ-ಚಿಶ್ತಿಯಾಮಿಯ ಪ್ರಕಟಣೆ ಉರ್ದುವಿನಲ್ಲಿ ಅದು ಅಜ್ಞಾನಿಗಳ ವ್ಯರ್ಥ ಸಲ್ಲಾಪ ಅಲ್ಲದೇ ಮತ್ತೇನಲ್ಲ.**

ಪೀರ್ ಮೆಹರ್ ಅಲಿ ಶಾ ಗೋಲ್ಡವಿ ಅವರು ಅರಬಿ ಭಾಷೆಯ ಗ್ರಂಥ "ಇಜಾಝುಲ್ ಮಸೀಹ್" ದ ಉತ್ತರವಂತೂ ಬರೆಯಲಿಲ್ಲ ಆದರೆ ಒಂದು ದೀರ್ಘ ಅವಧಿಯ ನಂತರ ಉರ್ದುವಿನಲ್ಲಿ ಒಂದು ಪುಸ್ತಕ "ಸೈಫ್ ಇ-ಚಿಶ್ತಿಯಾಮಿ" ಬರೆದು ಪ್ರಕಟಸಿದರು. ಆದರೆ ಅವರು ಸೂರಃ ಫಾತಿಹದ ತಫ್ಸೀರ್ ಪ್ರಕಟಿಸುವ ಬದಲು ಅದರಲ್ಲಿ ಅವರು "ಇಜಾಝುಲ್ ಮಸೀಹ್" ಮೇಲೆ ಟೀಕೆ ಟಿಪ್ಪಣಿ ಮತ್ತು ಆಕ್ಷೇಪಗಳನ್ನು ಎತ್ತಿದ್ದಾರೆ. ಅದರಿಂದ ಸ್ಪಷ್ಟವಾಗಿ ಸಾಬೀತಾಗುತ್ತದೆ. ಅವರಿಗೆ ಕೇವಲ ಅರಬಿ ಭಾಷೆ ಮಾತ್ರ ತಿಳಿದಿಲ್ಲ. ಬದಲು ಪವಿತ್ರ ಖುರ್‌ಆನ್‌ನ ತಿಳುವಳಿಕೆ ಮತ್ತು ಜ್ಞಾನವೇನೂ ಹೊಂದಿಲ್ಲ. ನಿಷ್ಠ ಮಟಮಟ ಉರ್ದುವಿನಲ್ಲಾದರೂ ತಮ್ಮ ಖುರ್‌ಆನ್‌ನ ಬಗ್ಗೆ ಇರುವ ಜ್ಞಾನ ತೋರಿಸುತ್ತಿದ್ದರೆ ಚೆನ್ನಾಗಿತ್ತು. ಸುಮಾರು ಒಂದೂವರೆ ವರ್ಷ ನಂತರ ಪುಸ್ತಕ "ಸೈಫ್ ಇ-ಚಿಶ್ತಿಯಾಯಿ" ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಅವರಿಗೆ ದೊರೆಯಿತು. ಆಗ ಅವರು ಅದರ ಮೇಲೆ ತಮ್ಮ ಅನಿಸಿಕೆ ಬರೆದು ಹೇಳಿದರು. ಈ ಪೈಕಿ ನಾನು ತಮ್ಮ ಕೆಲ ಹೇಳಿಕೆಗಳನ್ನು ಈ ಕೆಳಗೆ ಪ್ರಸ್ತುತಪಡಿಸುತ್ತೇನೆ.

ಈ ಪುಸ್ತಕ ನನಗೆ ಒಂದನೇ ಜುಲೈ 1902 ರಂದು ಅಂಚೆಯ ಮೂಲಕ ದೊರೆತಿದೆ. ಅದನ್ನು ಪೀರ್ ಮೆಹರ್ ಅಲಿ ಶಾ ಗೋಲ್ಡವಿ ಬಹುಶ: ಕಳುಹಿಸಿದ ಕಾರಣ ನನ್ನ ಪುಸ್ತಕ "ಇಜಾಝುಲ್ ಮಸೀಹ್" ಮತ್ತು ಶವ್ಸ್ ಬಾಝ್ಝೀಗ● ದ ಉತ್ತರ ಬರೆದಿದ್ದೇನೆ ಎಂದು ಭಾವಿಸಿರಬಹುದು.

ಆದರೆ ನನಗೆ ಈ ಭರವಸೆ ಇರಲಿಲ್ಲ. ಅವರು ನನ್ನ ಅರಬಿ ಪುಸ್ತಕದ ಉತ್ತರ ಉರ್ದುವಿನಲ್ಲಿ ಬರೆಯುವರು ಎಂದು. ಆದರೆ ನನ್ನ ಭಾವನೆ ಅವರು ನಾಚಿಕೆಪಟ್ಟು ಈ ಹೆಜ್ಜೆ ಇಟ್ಟಿರಬಹುದೆಂದು, ನನ್ನ ಪುಸ್ತಕ ಇಜಾಝುಲ್ ಮಸೀಹ್ ರೀತಿಯಲ್ಲಿ ಸೂರಃ ಫಾತಿಹದ ತಫ್ಸೀರ್ ವಾಕ್ಚಾತುರ್ಯಪೂರ್ಣ ಅರಬಿ ಭಾಷೆಯಲ್ಲಿ ಬರೆದು ಪ್ರಕಟಿಸಬೆಕು ಎಂದು ಅದರಿಂದ ಜನರು ತಿಳಿದುಕೊಳ್ಳಬಹುದು. ಪೀರ್‌ಜೀ ಅರಬಿ ಬಲ್ಲವರಾಗಿದ್ದಾರೆ ಎಂದು ಮತ್ತು ತಫ್ಸೀರ್ ಸಹ ಬರೆಯಬಲ್ಲರು ಎಂದು. ಆದರೆ ಅಕಟಾಕಟ" ನನ್ನ ಈ ಭಾವನೆ ಸತ್ಯವಾಗಲಿಲ್ಲ. ಅವರ ಪುಸ್ತಕ ಸೈಫ್ ಇ ಚಿಶ್ತಯಾಯಿ ನನಗೆ ದೊರೆಯಿತು. ಆಗ ಆ ಪುಸ್ತಕ ಕೈಯಲ್ಲಿ ಪಡೆದಾಗ ನನಗೆ ತುಂಬಾ ಸಂತೋಷವಾಯಿತು. ಈಗ ನಾವು ಅವರ ಅರಬಿ ತಫ್ಸೀರ್ ನೋಡಬಹುದು ಎಂದು. ಮತ್ತು ಅವರ ಎದುರು ನಮ್ಮ ತಫ್ಸೀರಿನ ಸ್ಥಾನಮಾನ ಜನರಿಗೆ ತಿಳಿಯುವಂತಾಗಬಹುದೆಂದು. ಆದರೆ ನಾನು ಪುಸ್ತಕ ತೆರೆದು ನೋಡಿದಾಗ ಅದು ಉರ್ದು ಭಾಷೆಯಲ್ಲಿ ಬರೆಯಲಾಗಿತ್ತು ಮತ್ತು ತಫ್ಸೀರಿನ ಹೆಸರೇ ಇರಲಿಲ್ಲ. ಆಗ ಅವರ ಸ್ಥಿತಿ ನೋಡಿ ನನಗೆ ಅಳುವಂತಾಯಿತು (ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ-18, ಪುಟ-429)

ನಾನು ಆ ಉರ್ದು ಪುಸ್ತಕವನ್ನು ಗಹನವಾಗಿ ನೋಡಿದಾಗ ತಿಳಿಯಿತು. ಅದು ವ್ಯರ್ಥ ಟೀಕೆ ಟಿಪ್ಪಣಿಯ ಹೊರತು ಏನು ನೋಡುವ ಯೋಗ್ಯವಿರಲಿಲ್ಲ. ಅಂತಹ ನೀಚ ಅಜ್ಞನ ಆಕ್ಷೇಪಗಳನ್ನು ಪರಿಶೀಲಿಸಿದಾಗ ಅದು ಯಾವ ರೀತಿಯಲ್ಲೂ ಪವಿತ್ರ ಖುರ್‌ಆನ್‌ಗೆ ಯೋಗ್ಯವಾಗಿರಲಿಲ್ಲ. ಹದೀಸುಗಳಿಗೂ ಮತ್ತು ಸಾಹಿತ್ಯಿಕ ಪುಸ್ತಕಗಳಿಗೂ ಸಮಾನವಾಗಿರಲಿಲ್ಲ. ಈಗ ಅವರ ಟೀಕೆಗಳಲ್ಲಿ ಕಿವಿಗೊಟ್ಟು ಕೇಳಿರಿ. ಪೀರ್ ಸಾಹಿಬ್ ಹೇಳುತ್ತಾರೆ ಎರಡು ನೂರು ಪುಟಗಳನ್ನು ಒಳಗೊಂಡಿರುವ ಈ ಇಜಾಝುಲ್ ಮಸೀಹ್ ಪುಸ್ತಕದಲ್ಲಿ ಕೆಲ ವಾಕ್ಯಗಳು ಒಟ್ಟುಗೂಡಿಸಲು (ಈ ನಾಲ್ಕು ಸಾಲುಗಿಂತ ಹೆಚ್ಚಲ್ಲ), ಅದರಲ್ಲಿ ಕೆಲ ಸ್ಥಳಗಳಲ್ಲಿ ಬರವಣಿಗೆ ಮತ್ತು ಕೆಲ ಪವಿತ್ರ ಖುರ್‌ಆನ್‌ನಿಂದ ಮತ್ತು ಕೆಲ ಇನ್ನಿತರ ಪುಸಕಗಳಿಂದ ಕದಿಯಲಾಗಿದೆ.

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

● "ಶವ್ಸ್ ಬಾಝಿಗ್ಘ" ಮೌಲ್ವಿ ಮುಹಮ್ಮದ್ ಅಹಸನ್ ಸಾಹಿಬ್ ಅಮ್ರೋಹಿ(ರ) ರವರ ಪುಸ್ತಕವಾಗಿದೆ. ಅದನ್ನು ಅವರು ಪೀರ್ ಮೆಹರ್ ಅಲಿ ಶಾ ಗೋಲ್ಡವಿಯವರ ಪುಸ್ತಕ "ಶಮ್ಸುಲ್ ಹಿದಾಯ ಮಸೀಹ್(ಅ) ರವರ ಜೀವಂತಿಕೆಯ ಕುರಿತು ಉತ್ತರವಾಗಿ ಬರೆದಿದ್ದರು. ಈ ಕುರಿತು ನಾನು ಮೌಲಾನ ಜಲಳಾಲುದ್ದೀನ್ ಶಮ್ಸ್ ಸಾಹಿಬ್ ರವರ ಒಂದು ರೋಚಕ ಟಿಪ್ಪಣಿ "ತೋಹಫ ಗೋಲ್ಡವಿಯ" ಪುಸ್ತಕದ ಪರಿಚಯಿಸುತ್ತಾ ಈ ಕೆಳಗೆ ನಮೂದಿಸುತ್ತೇನೆ. ಅವರು ಬರೆಯುತ್ತಾರೆ. ಕೆಲ ಅವಧಿ ನಂತರ ನೀವು ವಿರೋಧಿಯಾಗಿ ಮೈದಾನಕ್ಕೆ ಬಂದಿದ್ದೀರಿ. (ಅಂದರೆ ಪೀರ್ ಮೆಹರ್ ಅಲಿ ಶಾ ಗೋಲ್ಡವಿ)

ಜನವರಿ 1900 ರಲ್ಲಿ ಹಝ್‌ರತ್ ಮಸೀಹ್ ಮೌಊದ್(ಅ) ರವರ ವಿರುದ್ಧ ಉರ್ದುವಿನಲ್ಲಿ "ಶಮ್ಸುಲ್ ಹದಾಯ ಫೀ ಇಸ್ಬಾತ್ ಹಯಾತುಲ್ ಮಸೀಹ್" ಹೆಸರಿನ ಪುಸ್ತಕ ಪ್ರಕಟಿಸಿದೆ ಅದು ನಿಜ ಅರ್ಥದಲ್ಲಿ ಅವರ ಒಬ್ಬ ಚೆಲಾ ಮೌಲವಿ ಮುಹಮ್ಮದ್ ಗ್ಹಾಝಿಯವರ ಪುಸ್ತಕವಾಗಿದೆ. ಅದನ್ನು ಅವರು ತಮ್ಮ ಒಂದು ಪತ್ರ ಹಝ್‌ರತ್ ಮೌಲವಿ ಹಕೀಮ್ ನೂರುದ್ದೀನ್(ರ) ಅವರನ್ನು ದಿನಾಂಕ: 26 ಜುಲೈ ಶವ್ವಲ್ 1317 ಹಿ (28 ಮಾರ್ಚ್ 1900) ರ ವಿವರವು ನೀಡಿದ್ದಾರೆ. ಈ ಪತ್ರದ ಸುದ್ದಿ ಬಹಿರಂಗವಾದಾಗ ಪೀರ್ ಸಾಹಿಬ್ ಅವರು ತಮ್ಮ ಒಂದು ಶಿಷ್ಯನ ಪ್ರಶ್ನೆಯ ಮೇಲೆ ಹೀಗೆ ವ್ಯಕ್ತಪಡಿಸಿದರು. ಅಂದಹಾಗೆ ತಿಳಿಸಬೇಕು. ಅವರು ಸ್ವಯಂ ಆ ಪುಸ್ತಕ ಬರೆದಿದ್ದಾರೆ. ಹಝ್‌ರತ್ ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಪೀರ್ ಸಾಹಿಬರ ಈ ಡೋಂಗಿತನದ ಮೇಲೆ ಮೌನ ತಾಳಲಿಲ್ಲ. ಬದಲು ಅವರು 24 ಏಪ್ರಿಲ್ 1900 ರ ಪತ್ರಿಕೆ ಅಲ್-ಹಶಮ್‌ನಲ್ಲಿ ಈ ಪತ್ರಗಳು ಪ್ರಕಟಿಸಿದರು ಆ ನಿಮಿತ್ತ ಅವರ ಚೆಲಾಗಳಲ್ಲಿ ಗುಸುಗುಸು ಶುರುವಾಯಿತು. ಮತ್ತು ಈಚೆ ಮೌಲ್ವಿ ಮುಹಮ್ಮದ್ ಅಹಸನ್ ಸಾಹಿಬ್ ಅಮ್ರೋಹಿ ಅವರು "ಶಮ್ಸುಲ್ ಹಿದಾಯ" ದ ಉತ್ತರ "ಶಮ್ಸುಲ್ ಬಾಝಿಗ" ರೂಪದಲ್ಲಿ ಪ್ರಕಟಿಸಿದರು. ಏಕೆಂದರೆ ಕೊನೆಯಲ್ಲಿ ಚರ್ಚೆಗೋಸ್ಕರ ಬರಲು ಆಹ್ವಾನ ನೀಡಲಾಗಿತ್ತು. ಆದುದರಿಂದ ಮೌಲ್ವಿ ಸಾಹಿಬ್ ದಿನಾಂಕ: 9 ಜುಲೈ 1900 ರಂದು ಜಾಹೀರಾತು ಮೂಲಕ ಪೀರ್ ಸಾಹಿಬರಿಗೆ ಸೂಚನೆ ನೀಡಿದರು. "ನಾನು ಚರ್ಚೆಗೋಸ್ಕರ ಸಿದ್ಧನಿದ್ದೇನೆ.

# ಖುತ್‌ಬ ಜುಮುಅ

**ಹಝ್ರತ್ ಅಬೂಕಬಕರ್(ರ) ಬಹಳ ದೂರದೃಷ್ಟಿ ಹೊಂದಿದ್ದ ವ್ಯಕ್ತಿಯಾಗಿದ್ದರು. ಸಂಗತಿಗಳ ಕೊನೆಯ ಪರಿಣಾಮದ ಬಗ್ಗೆ ಗಮನವಹಿಸುತ್ತಿದ್ದರು. ಕಠಿಣವಾಗಿ ವರ್ತಿಸಬೇಕಾದ ಸಂದರ್ಭಗಳಲ್ಲಿ ಕಠಿಣತೆ ತೋರಿಸುತ್ತಿದ್ದರು. ಕ್ಷಮಾಪಣೆಯ ಆವಶ್ಯಕತೆ ಇರುವ ಸ್ಥಳದಲ್ಲಿ ಕ್ಷಮಿಸುತ್ತಿದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಅಬೂಬಕ್ಕರ್ ಸಿದ್ದೀಖ್(ರ)ರವರ ಖಿಲಾಫತ್ ಕಾಲಘಟ್ಟದಲ್ಲಿ ಧರ್ಮಯಾಗಿಗಳ ವಿರುದ್ಧ ನಡೆದ ಯೋಜನೆಗಳ ಕುರಿತು ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08-07-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ـ اَلرَّحْمٰنِ الرَّحِيمِ ـ مٰلِكِ يَوْمِ الدِّينِ ـ

اِيَّاكَ نَعْبُدُ وَاِيَّاكَ نَسْتَعِينُ ـ اِهْدِنَا الصِّرَاطَ الْمُسْتَقِيمَ ـ

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ـ

ಹಝ್ರತ್ ಅಬೂಬಕರ್(ರ)ರ ಕಾಲಘಟ್ಟದಲ್ಲಿ ಧರ್ಮತ್ಯಾಗಿಗಳಾದ ದಂಗೆಗಾರರ ವಿರುದ್ಧ ಕಾರ್ಯಾಚರಣೆಯ ಪ್ರಸ್ತಾಪ ನಡೆಯುತ್ತಿದೆ. ಇದಕ್ಕೆ ಸಂಬಂಧಿಸಿ ಹನ್ನೊಂದನೇ ಕಾರ್ಯಾಚರಣೆಯ ಕುರಿತು ಬರೆಯಲಾಗಿದೆ. ಈ ಕಾರ್ಯಾಚರಣೆಯು ಮುಹಾಜಿರ್ ಬಿನ್ ಉಮಯ್ಯ(ರ) ಯಮನಿನ ಧರ್ಮತ್ಯಾಗಿಗಳಾದ ದಂಗೆಗಾರರ ವಿರುದ್ಧ ನಡೆಸಿದ್ದಾಗಿತ್ತು. ಹಝ್ರತ್ ಅಬೂಬಕರ್(ರ) ಒಂದು ಧ್ವಜವನ್ನು ಹಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯ(ರ)ರಿಗೆ ನೀಡುತ್ತಾ ಅಸ್ವದ್ ಅನ್ಸಿಯ ಸೈನ್ಯವನ್ನು ಎದುರಿಸಲು ಮತ್ತು ಖೈಸ್ ಬಿನ್ ಮಕ್‌ಶೂಹ್ ಮತ್ತು ಇತರ ಯಮನ್ ನಿವಾಸಿಗಳೊಡನೆ ಹೋರಾಡುತ್ತಿದ್ದ ಅಬ್ನಾರಿಗೆ ನೆರವು ನೀಡಲು ಆದೇಶ ನೀಡಿದರು. ಆ ಸಮಯದಲ್ಲಿ ಯಮನಿನಲ್ಲಿ ಎರಡು ವಿಭಾಗಗಳಿದ್ದುವು. ಒಂದು ಅಲ್ಲಿಯ ಖಾಸಗಿ ನಿವಾಸಿಗಳಾಗಿದ್ದರು. ಅವರ ಸಂಬಂಧ ಸಬಾಹ್ ಮತ್ತು ಹಮೀರಿನ ಕುಟುಂಬದೊಂದಾಗಿತ್ತು. ಮತ್ತೊಂದು ಫಾರಸೀ ಪರಂಪರೆಯ ಸಂತಾನಗಳು. ಅವರನ್ನು ಅಬ್ನಾ ಎಂದು ಹೇಳಲಾಗುತ್ತದೆ. ಅಬ್ನಾ ಎಂಬುದು ಯಮನನಲ್ಲಿ ಆ ಕಾಲದಲ್ಲಿ ಅತ್ಯಂತ ಶಕ್ತಿಶಾಲಿ ಅಲ್ಪಸಂಖ್ಯಾತರಾಗಿದ್ದರು. ಒಂದು ದೀರ್ಘಕಾಲದ ವರೆಗೆ ಯಮನಿನ ಅಧಿಕಾರಿ ಇರಾನಿನ ಅರಸನ ಆಡಳಿತದ ಅಧೀನದಲ್ಲಿತ್ತು. ಆದ್ದರಿಂದ ಆಡಳಿತದ ಬಹುತೇಕ ಹುದ್ದೆಗಳು ಅಬ್ನಾರಿಗೆ ಲಭಿಸಿದ್ದುವು. ಹೇಗಿದ್ದರೂ ಅಲ್ಲಿನ ಕಾರ್ಯ ಮುಕ್ತಾಯಗೊಳಿಸಿದ ನಂತರ ಕಿಂದ ಗೋತ್ರವನ್ನು ಎದುರಿಸಲಿಕ್ಕಾಗಿ ಹಝ್ರೇ ಮೌತಿಗೆ ಹೋಗಲು ಹಝ್ರತ್ ಅಬೂಬಕರ್(ರ) ನಿರ್ದೇಶನ ನೀಡಿದರು ಎಂದು ಬರೆಯಲಾಗಿದೆ. (ತಾರೀಖ್ ಅತ್ತಬರಿ, ಸಂಪುಟ-2, ಪುಟ-257, ದಾರುಲ್ ಕುತುಬ್ ಅಲ್‌ಇಲ್‌ಮಿಯ ಲಬನಾನ್ 2012)

ಹಝ್ರೆ ಮೌತ್ ಎಂಬುದು ಪೂರ್ವದ ಕಡೆಗೆ ಒಂದು ವಿಸ್ತಾರವಾದ ಪ್ರದೇಶವಾಗಿದೆ. ಅದರಲ್ಲಿ ಇಪ್ಪತ್ತರಷ್ಟು ಗ್ರಾಮಗಳಿವೆ. ಹಝ್ರೆ ಮೌತ್ ಮತು ಸುನಾದ ನಡುವೆ 216 ಮೈಲುಗಳ ದೂರವಿದೆ. (ಮುಜಮುಲ್ ಬಲದಾನ್, ಸಂಪುಟ-2, ಪುಟ-311) (ಫರ್ಹಂಗ್ ಸೀರತ್, ಪುಟ-226, ಝುವಾರ ಅಕಾಡಮಿ ಕರಾಚಿ)

ಕಿಂದ ಎಂಬುದು ಯಮನನ ಒಂದು ಗೋತ್ರದ ಹೆಸರಾಗಿದೆ. (ಫರ್ಹಂಗ್ ಸೀರತ್, ಪುಟ-248, ಝುವಾರ ಅಕಾಡಮಿ ಕರಾಚಿ)

ಹಝ್ರತ್ ಮುಹಾಜಿರ್(ರ)ರ ಪರಿಚಯದ ಬಗ್ಗೆ ಬರೆಯಲಾಗಿದೆ. ಅವರ ಹೆಸರು ಮುಹಾಜಿರ್ ಬಿನ್ ಅಬೂ ಉಮಯ್ಯ ಬಿನ್ ಮುಗೈರ ಬಿನ್ ಅಬ್ದುಲ್ಲಾಹ್ ಎಂದಾಗಿತ್ತು. ಹಝ್ರತ್ ಮುಹಾಜಿರ್ ಬಿನ್ ಅಬೂ ಉಮಯ್ಯ(ರ) ಉಮ್ಮುಲ್ ಮೂಅ್‌ಮಿನೀನ್ ಹಝ್ರತ್ ಉಮ್ಮೇ ಸಲ್ಮಾ(ರ)ರ ಸಹೋದರನಾಗಿದ್ದರು. ಅವರು ಬದ್ರ್ ಯುದ್ಧದಲ್ಲಿ ಬಹುದೇವಾರಾಧಕರ ಕಡೆಯಿಂದ ಭಾಗಿಯಾಗಿದ್ದರು. ಆ ದಿನದಂದು ಅವರ ಇಬ್ಬರು ಸಹೋದರರಾದ ಹಿಶಾಮ್ ಮತ್ತು ಮಸೂದ್ ಕೊಲ್ಲಲ್ಪಟ್ಟರು. ಅವರ ಯಥಾರ್ಥ ಹೆಸರು ವಲೀದ್ ಎಂದಾಗಿತ್ತು. ಅದನ್ನು ಹಝ್ರತ್ ಪೈಗಂಬರ್(ಸ) ಬದಲಾಯಿಸಿದರು. (ಅಸದುಲ್‌ಗಾಬ, ಭಾಗ-5, ಪುಟ-265, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003) (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಭಾಗ-6, ಪುಟ-180, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಒಂದು ವರದಿಯಲ್ಲಿ ಹೀಗಿದೆ: ಅವರು ತಬೂಕ್ ಯುದ್ಧದಿಂದ ಹಿಂದೆ ಉಳಿದಿದ್ದರು. ಹಝ್ರತ್ ಪೈಗಂಬರ್(ಸ) ಯುದ್ಧದಿಂದ ಮರಳಿ ಬಂದಾಗ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಅಸಂತುಷ್ಟಿಗೊಂಡಿದ್ದರು. ಒಂದು ದಿನ ಹಝ್ರತ್ ಉಮ್ಮೇ ಸಲ್ಮಾ(ರ) ಹಝ್ರತ್ ಪೈಗಂಬರ್(ಸ)ರ ತಲೆಯನ್ನು ತೊಳೆಯುತ್ತಿದ್ದರು. ಆಗ ಅವರು ಹೇಳಿದರು: ನೀವು ನನ್ನ ಸಹೋದರನೊಡನೆ ಅತೃಪ್ತರಾಗಿರುವ ಸ್ಥಿತಿಯಲ್ಲಿ ನನಗೆ ಯಾವುದೇ ಸಂಗತಿ ಹೇಗೆ ಪ್ರಯೋಜನ ನೀಡುವುದು. ಹಝ್ರತ್ ಪೈಗಂಬರ್(ಸ)ರಲ್ಲಿ ಅಲ್ಪ ಸೌಮ್ಯ ಮತ್ತು ವಾತ್ಸಲ್ಯದ ಲಕ್ಷಣಗಳನ್ನು ಹಝ್ರತ್ ಉಮ್ಮೇ ಸಲ್ಮಾ(ರ) ಕಂಡಾಗ ತನ್ನ ಸೇವಕಿಯೊಡನೆ ಮುಹಾಜಿರರನ್ನು ಕರೆದುಕೊಂಡು ಬರಲು ಸೂಚನೆ ನೀಡಿದರು. ಮುಹಾಜಿರ್(ರ) ಬಂದು ನಿರಂತರವಾಗಿ ತನ್ನ ಕ್ಷಮಾಪಣೆ ಕೇಳುತ್ತಲೇ ಹೋದರು. ಕೊನೆಗೆ ಹಝ್ರತ್ ಪೈಗಂಬರ್(ಸ) ಅವರು ಯುದ್ಧದಲ್ಲಿ ಭಾಗವಹಿಸದೇ ಇರಲು ಹೇಳಿದ ಕಾರಣಗಳನ್ನು ಒಪ್ಪಿಕೊಂಡರು ಮತ್ತು ಅವರ ಬಗ್ಗೆ ತೃಪ್ತಿ ಸೂಚಿಸಿದರು ಹಾಗೂ ಅವರನ್ನು ಹಝ್ರತ್ ಪೈಗಂಬರ್(ಸ) ಕಿಂದದ ಅಧಿಕಾರಿಯನ್ನಾಗಿ ಮಾಡಿದರು. ಆದರೆ ಅವರು ರೋಗಿಯಾದ ಕಾರಣದಿಂದ ಅಲ್ಲಿಗೆ ಹೋಗಲು ಸಾಧ್ಯವಾಗದೇ ಹೋದಾಗ ಅವರು ಝಿಯಾದ್(ರ)ರೊಡನೆ ಅವರಿಗಾಗಿ ಅವರಿಗೆ ಒಪ್ಪಿಸಲಾದ ಕೆಲಸವನ್ನು ಕೂಡ ಮಾಡಲು ಪತ್ರ ಬರೆದರು. ಅನಂತರ ರೋಗಶಮನವಾದಾಗ ಹಝ್ರತ್ ಅಬೂಬಕರ್(ರ) ಅವರಿಗಾಗಿ ಹಝ್ರತ್ ಪೈಗಂಬರ್(ಸ) ಮಾಡಿದ ಅಧಿಕಾರದ ನೇಮಕವನ್ನು ಈಡೇರಿಸಿದರು. ಅವರನ್ನು ನಜ್ರಾನಿನಿಂದ ಯಮನಿನ ಗಡಿ ಪ್ರದೇಶದ ವರೆಗಿನ ಅಧಿಕಾರಿಯನ್ನಾಗಿ ಮಾಡಿದರು ಮತ್ತು ಯುದ್ಧ ಮಾಡಲು ಆದೇಶಿಸಿದರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-300, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಝಿಹಾಕ್ ಬಿನ್ ಫಿರೋಝ್ ಹೇಳುತ್ತಾರೆ: ಮೊತ್ತಮೊದಲು ಯಮನಿನಲ್ಲಿ ಹಝ್ರತ್ ಪೈಗಂಬರ್(ಸ)ರ ಕಾಲಘಟ್ಟದಲ್ಲಿ ಧರ್ಮತ್ಯಾಗ ಶುರುವಾಗಿತ್ತು. ಅದರ ಸೂತ್ರಧಾರ ಧುಲ್‌ಖಿಮಾರ್ ಅಬ್‌ಹಲ ಬಿನ್ ಕಅ್‌ಬ್ ಆಗಿದ್ದನು. ಅವನು ಅಸ್ವದ್ ಅನ್ಸಿ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-224, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಅಸ್ವದ್ ಅನ್ಸ ಯಮನಿನ ಗೋತ್ರವಾದ ಬನೂ ಅನ್ಸಿನ ಸರದಾರನಾಗಿದ್ದನು. ಕಪ್ಪು ಚರ್ಮದವನಾಗಿದ್ದ ಕಾರಣದಿಂದ ಅಸ್ವದ್ ಎಂದು ಕರೆಯಲ್ಪಡುತ್ತಿದ್ದನು. (ಸೀರತ್ ಸಯ್ಯದುನಾ ಹಝ್ರತ್ ಅಬೂಬಕರ್ ಸಿದ್ದೀಖ್(ರ), ಅಬುನ್ನಸರ್ ಅನುವಾದಕ ಪುಟ-570)

ಒಂದು ವರದಿಯಲ್ಲಿ ಅವನ ಹೆಸರು ಅಬ್‌ಹಲ ಬಿನ್ ಕಾಬ್ ಎಂಬುದಕ್ಕೆ ಬದಲಾಗಿ ಐಹಲ ಬಿನ್ ಕಾಬ್ ಬಿನ್ ಔಫ್ ಅನ್ಸಿ ಎಂದಿದೆ. ಅಸ್ವದ್ ಅನ್ಸಿಯ ಉಪನಾಮ ಧುಲ್‌ಖಿಮಾರ್ ಎಂದಾಗಿತ್ತು. ಏಕೆಂದರೆ ಅವನು ಯಾವಾಗಲೂ ಚಾದರವನ್ನು ದೇಹದ ಮೇಲೆ ಸುತ್ತಿ ಇರುತ್ತಿದ್ದನು. (ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಸಂಪುಟ-2, ಪುಟ-201, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006)

ಕೆಲವರ ಪ್ರಕಾರ ಅವನ ಉಪನಾಮ ಧುಲ್‌ಖುಮಾರ್ ಎಂದಾಗಿದೆ. ಎಂದರೆ ಮದ್ಯಪಾನದಲ್ಲಿ ಮತ್ತೇರಿದವನಾಗಿ ಅವನನ್ನು ಕಾಣಬಹುದಾಗಿತ್ತು. ಕೆಲವು ವರದಿಗಳಲ್ಲಿ ಅವನ ಉಪನಾಮ ಧುಲ್‌ಹಿಮಾರ್ ಎಂದಾಗಿದೆ. ಅದಕ್ಕಿರುವ ಕಾರಣ ಹೀಗೆಂದು ಹೇಳಲಾಗುತ್ತದೆ. ಅಸ್ವದಿನ ಬಳಿ ಒಂದು ಸಾಕು ಕತ್ತೆಯಿತ್ತು. ಅದರೊಡನೆ ಸಾಷ್ಟಾಂಗವೆರಗಲು ಹೇಳಲಾದರೆ, ಅದು ಸಾಷ್ಟಾಂಗ ಮಾಡುತ್ತಿತ್ತು. ಕುಳಿತುಕೊಳ್ಳಲು ಹೇಳಲಾಗುವಾಗ ಕುಳಿತುಕೊಳ್ಳುತ್ತಿತ್ತು. ನಿಂತುಕೊಳ್ಳಲು ಹೇಳಲಾಗುವಾಗ ನಿಂತುಕೊಳ್ಳುತ್ತಿತ್ತು. (ಅಲ್‌ಇಸ್ತಾಬುಸ್ಸಹಾರಿ, ಭಾಗ-1, ಪುಟ-387, 2006 ಪ್ರಕಟಿತ)

ಕೆಲವರ ಪ್ರಕಾರ ಅವನನ್ನು ಧುಲ್‌ಹಿಮಾರ್ ಎಂದು ಹೇಳಲು ಕಾರಣವೇನೆಂದರೆ, ಅವನು ಹೀಗೆ ಹೇಳುತ್ತಿದ್ದನು: ಯಾವನು ನನ್ನ ಸಮೀಪಕ್ಕೆ ಬರುತ್ತಾನೋ ಅವನು ಕತ್ತೆಯ ಮೇಲೆ ಸವಾರನಾಗುತ್ತಾನೆ. (ಮದಾರಿಜುನ್ನುಬುವ್ವ, ಸಂಪುಟ-2, ಪುಟ-481, ಝಿಯಾಉಲ್ ಖುರ್‌ಆನ್ ಪಬ್ಲಿಕೇಷನ್ಸ್ ಲಾಹೋರ್)

ಹೇಗಿದ್ದರೂ ಮುಸೈಲಿಮ ತನ್ನ ಬಿರುದುನಾಮ ರಹ್ಮಾನುಲ್‌ಯಮಾಮ ಎಂದು ಇರಿಸಿದ ಹಾಗೆಯೇ ಅಸ್ವದ್ ತನ್ನ ಬಿರುದುನಾಮ ರಹ್ಮಾನುಲ್‌ಯಮನ್ ಎಂದು ಇರಿಸಿದ್ದನು. ಅವನ ಮೇಲೆ ದಿವ್ಯವಾಣಿ ಅವತೀರ್ಣವಾಗುತ್ತದೆ ಎಂದೂ ಅವನಿಗೆ ಶತ್ರುಗಳ ಎಲ್ಲ ಯೋಜನೆಗಳ ಕುರಿತು ಮೊದಲೇ ಗೊತ್ತಾಗಿ ಬಿಡುತ್ತದೆ ಎಂದು ಕೂಡ ಅವನು ಹೇಳುತ್ತಿದ್ದನು. (ಸೀರತ್ ಸಯ್ಯಿದುನಾ ಹಝ್ರತ್ ಅಬೂಬಕರ್ ಸಿದ್ದೀಖ್(ರ), ಅಬುನ್ನಸರ್, ಅನುವಾದ ಪುಟ-571)

ಅಸ್ವದ್ ಅನ್ಸಿ ಜಾದೂಗಾರನಾಗಿದ್ದನು. ಜನರಿಗೆ ಜಾದೂಗಾರಿಕೆಯನ್ನು ತೋರಿಸುತ್ತಿದ್ದನು. (ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಸಂಪುಟ-2, ಪುಟ-201, ಝಿಕರ್ ಅಖ್ಬಾರ್ ಅಲ್‌ಅಸ್ವದುಲ್ ಅನ್ಸಿ, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2006)

ಇಬ್ಬರು ಸುಳ್ಳು ಪ್ರವಾದಿಗಳು ಬರುವರು ಎಂದು ಹಝ್ರತ್ ಪೈಗಂಬರ್(ಸ)ರಿಗೆ ಕನಸಿನಲ್ಲಿ ಮೊದಲೇ ತಿಳಿಸಲಾಗಿತ್ತು ಎಂದು ಬುಖಾರಿಯಲ್ಲಿ ವರದಿಯಿದೆ. ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ:

ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ನಿದ್ದೆ ಮಾಡುತ್ತಿದ್ದೆ. ಕನಸಿನಲ್ಲಿ ನನಗೆ ಭೂಮಿಯ ಭಂಡಾರಗಳು ದಯಪಾಲಿಸಲಾಯಿತು. ನನ್ನ ಕೈಗಳಲ್ಲಿ ಎರಡು ಚಿನ್ನದ ಬಳೆಗಳನ್ನು ಇರಿಸಿಲಾಯಿತು. ಅದು ನನಗೆ ಇಷ್ಟವಾಗಲಿಲ್ಲ. ಎರಡನ್ನೂ ಊದಲು ಅಲ್ಲಾಹನು ಆಗ ನನಗೆ ದಿವ್ಯವಾಣಿ ಮೂಲಕ ತಿಳಿಸಿದನು. ನಾನು ಊದಿದಾಗ ಅವುಗಳು ಅದೃಶ್ಯವಾದವು. ನನ್ನ ಎರಡೂ ಕಡೆಗಳಲ್ಲಿ ಇರುವ ಇಬ್ಬರು ಸುಳ್ಳು ಪ್ರವಾದಿಗಳೆಂದು ನಾನು ಅದನ್ನು ವ್ಯಾಖ್ಯಾನಿಸಿದೆ. ಅವರು ಸುನ್‌ಅದವನಾದ ಅಸ್ವದ್ ಅನ್ಸಿ ಮತ್ತು ಯಮಾಮದ ಮುಸೈಲಿಮ ಕದ್ದಾಬ್ ಆಗಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಮಗ್ಸಾಝಿ, ವರದಿ ಸಂಖ್ಯೆ-4375)

ಬುಖಾರಿಯಲ್ಲೇ ಮತ್ತೊಂದು ವರದಿಯಿದೆ. ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಇಬ್ನು ಅಬ್ಬಾಸ್ ಇದನ್ನು ವರದಿ ಮಾಡಿರುವರು. ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಎರಡೂ ಕೈಗಳಲ್ಲಿ ಎರಡು ಚಿನ್ನದ ಬಳೆಗಳನ್ನು ಇರಿಸಲಾಯಿತು. ಅದರಿಂದ ನಾನು ಗಾಬರಿಗೊಂಡೆ ಮತ್ತು ಅದು ನನಗೆ ಇಷ್ಟವಾಗಲಿಲ್ಲ. ನನಗೆ ಅಲ್ಲಾಹನು ತಿಳಿಸಿದಂತೆ ನಾನು ಎರಡರ ಮೇಲೂ ಊದಿದಾಗ ಅವು ಹಾರಿ ಹೋದುವು. ನನ್ನ ವಿರುದ್ಧವಾಗಿ ನಿಲ್ಲುವ ಎರಡು ಸುಳ್ಳುವಾದಿಗಳೆಂದು ನಾನು ಆ ಕನಸನ್ನು ವ್ಯಾಖ್ಯಾನಿಸಿದೆ. ವರದಿಗಾರ ಹೇಳುತ್ತಾರೆ: ಅವರಲ್ಲಿ ಒಬ್ಬನು ಅನ್ಸಿಯಾಗಿದ್ದನು. ಅವನನ್ನು ಯಮನಿನಲ್ಲಿ ಫೀರೋಝ್ ಕೊಂದನು. ಮತ್ತೊಬ್ಬ ಮುಸೈಲಿಮ ಕದ್ದಾಬ್. (ಸಹೀಹ್ ಬುಖಾರಿ, ಕಿತಾಬುಲ್ ಮಘಾಝಿ, ಹದೀಸ್-4379)

ಹಝ್ರತ್ ಪೈಗಂಬರ್(ಸ) ಇರಾನಿನ ಅರಸನಾದ ಕಿಸ್ರನನ್ನು ಇಸ್ಲಾಮಿಗೆ ಆಹ್ವಾನಿಸುತ್ತಾ ಪತ್ರ ಬರೆದಾಗ ಅವನು ಕೋಪಗೊಂಡು, ಹಝ್ರತ್ ಪೈಗಂಬರ್(ಸ)ರ ತಲೆಯನ್ನು ತೆಗೆದುಕೊಂಡು ಅರಮನೆಗೆ ಬರಲು ತನ್ನ ಅಧೀನದಲ್ಲಿದ್ದ ಯಮನಿನ ಅಧಿಕಾರಿಯಾದ ಬಾಜ್ಞಾನಿಗೆ ಆದೇಶ ನೀಡಿದನು. ಅವನು ಇಬ್ಬರು ವ್ಯಕ್ತಿಗಳನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕಳುಹಿಸಿದನು. ಆದರೆ ಅವರು ಮದೀನಕ್ಕೆ ತಲುಪಿದಾಗ ಅವರೊಡನೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ನಿಮ್ಮ ಅರಸನನ್ನು ಅವನ ಮಗನಾದ ಶೀರೋಯ ವಧಿಸಿದ್ದಾನೆ ಮತ್ತು ಅವನ ಸ್ಥಾನದಲ್ಲಿ ಸ್ವತಃ ಅರಸನಾಗಿ ಕುಳಿತುಕೊಂಡಿದ್ದಾನೆ ಎಂದು ನನ್ನ ಅಲ್ಲಾಹನು ನನಗೆ ತಿಳಿಸಿರುವನು. ಅದರೊಂದಿಗೆ ಬಾಜ್ಞಾನಿಗೆ ಇಸ್ಲಾಮಿನ ಸಂದೇಶವನ್ನು ನೀಡುತ್ತಾ ಹಝ್ರತ್ ಪೈಗಂಬರ್(ಸ) ಹೀಗೆ ತಿಳಿಸಿದರು: ಅವನು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದರೆ, ಅವನನ್ನು ಹಿಂದಿನಂತೆ ಯಮನಿನ ಅಧಿಕಾರಿಯನ್ನಾಗಿ ಇರಿಸಲಾಗುವುದು. ಇದನ್ನು ಆಲಿಸಿದ ನಂತರ ಇಬ್ಬರು ವ್ಯಕ್ತಿಗಳು ಮರಳಿ ಹೋದರು, ಬಾಜ್ಞಾನಿಗೆ ಎಲ್ಲ ಸಂಗತಿಗಳನ್ನು ಹೇಳಿಕೊಟ್ಟರು. ಅದೇ ವೇಳೆ ಹಝ್ರತ್ ಪೈಗಂಬರ್(ಸ) ಹೇಳಿದಂತೆ ನಡೆಯಿತು ಎಂಬ ಸುದ್ದಿ ಬಾಜ್ಞಾನಿಗೆ ಲಭಿಸಿತು. ಈ ಮಾತು ಈಡೇರಿರುವುದನ್ನು ಕಂಡಾಗ, ಬಾಜ್ಞಾನ್ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದನು. ಹಝ್ರತ್ ಪೈಗಂಬರ್(ಸ) ಅವನನ್ನು ಯಮನಿನ ಅಧಿಕಾರ ಸ್ಥಾನದಲ್ಲಿ ನೆಲೆನಿಲ್ಲಿಸಿದರು. (ಹಝ್ರತ್ ಅಬೂಬಕರ್ ಸಿದ್ದೀಖ್(ರ)(ಅನುವಾದ) ಮುಹಮ್ಮದ್ ಹುಸೈನ್ ಹೈಕಲ್, ಉರ್ದು ಅನುವಾದ ಪುಟ-117-118)

ಆ ಪತ್ರದ ಬಗ್ಗೆ ಮತ್ತು ಇಸ್ಲಾಮಿಗೆ ಆಹ್ವಾನ ನೀಡಿದ ಬಗ್ಗೆ ಹಾಗೂ ಕಿಸ್ರಾ ಹೇಳಿದ ಮಾತಿನ ಬಗ್ಗೆ ಒಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಬರೆಯುತ್ತಾರೆ: ಅಬ್ದುಲ್ಲಾಹ್ ಬಿನ್ ಹುಧಾಫ ಹೇಳುತ್ತಾರೆ: ನಾನು ಇರಾನಿನ ಅರಸನ ಅರಮನೆಗೆ ತಲುಪಿದಾಗ ನಾನು ಒಳಗೆ ಪ್ರವೇಶಿಸಲು ಅನುಮತಿಯನ್ನು ಕೇಳಿದೆ. ನನಗೆ ಅನುಮತಿ ನೀಡಲಾಯಿತು. ನಾನು ಮುಂದಕ್ಕೆ ಹೋಗಿ ಹಝ್ರತ್ ಪೈಗಂಬರ್(ಸ)ರ ಪತ್ರವನ್ನು ಅರಸನ ಕೈಗೆ ನೀಡಿದಾಗ ಅವನು ಅನುವಾದಕನಿಗೆ ಅದನ್ನು ಓದಿಹೇಳಲು ಆದೇಶ ನೀಡಿದನು. ಅನುವಾದಕನು ಅದರ ತರ್ಜುಮೆಯನ್ನು ಓದಿಹೇಳಿದಾಗ ಅರಸನು ಕೋಪದಿಂದ ಪತ್ರವನ್ನು ಹರಿದು ಹಾಕಿದನು. ಅಬ್ದುಲ್ಲಾಹ್ ಬಿನ್ ಹುಝಾಫ ಈ ವಾರ್ತೆಯನ್ನು ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿದಾಗ ಅವರು ಹೇಳಿದರು:

ಕಿಸ್ರಾನು ನನ್ನ ಪತ್ರದೊಂದಿಗೆ ಮಾಡಿದ ರೀತಿಯಲ್ಲೇ ಅಲ್ಲಾಹನು ಅವನ ಆಡಳಿತದೊಂದಿಗೂ ಮಾಡುವನು.

ಕಿಸ್ರಾ ಅರಸ ಹೀಗೆ ಮಾಡಲು ಕಾರಣವೇನೆಂದರೆ, ಅರೇಬಿಯದ ಯಹೂದಿಯರು, ರೋಮಿನ ಆಡಳಿತದಿಂದ ಪರಾರಿಯಾಗಿ ಇರಾನಿನ ಆಡಳಿತಕ್ಕೆ ಬಂದವರ ಜೊತೆಗೆ ಸೇರಿಕೊಂಡು ಮತ್ತು ರೋಮಿನ ಆಡಳಿತದ ವಿರುದ್ಧದ ಸಂಚಿನಲ್ಲಿ ಕಿಸ್ರಾನ ಜೊತೆಗೆ ಸೇರಿಕೊಂಡು ಕಿಸ್ರಾನ ಗೌರವ ಗಳಿಸಿದ್ದರು. ಅವರು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಕಿಸ್ರಾನನ್ನು ಕೋಪಗೊಳ್ಳುವಂತೆ ಮಾಡಿದ್ದರು. ಈ ಪತ್ರವು ಅವರ ಮಾತುಗಳು ಸತ್ಯವೆಂದು ಸಾಬೀತುಪಡಿಸಿದ್ದಾಗಿ ಅವನು ಭಾವಿಸಿದನು. ಹಝ್ರತ್ ಪೈಗಂಬರ್(ಸ) ಇರಾನಿನ ಆಡಳಿತದ ಮೇಲೆ ಕಣ್ಣಿಟ್ಟಿದ್ದಾರೆ ಎಂದು ಅವನು ಭಾವಿಸಿದನು. ಹೀಗೆ ಪತ್ರ ಓದಿದ ಕೂಡಲೇ ಕಿಸ್ರಾ ತನ್ನ ಯಮನಿನ ಗವರ್ನರಿಗೆ ಒಂದು ಪತ್ರವನ್ನು ಬರೆದನು. ಅದರ ವಿಷಯ ಹೀಗಿತ್ತು: ಖುರೈಶಿಗಳಲ್ಲಿ ಒಬ್ಬ ವ್ಯಕ್ತಿ ಪ್ರವಾದಿತ್ವವನ್ನು ವಾದಿಸಿದ್ದಾರೆ. ತನ್ನ ವಾದದಲ್ಲಿ ಬಹಳ ಮುಂದೆ ಹೋಗಿರುವರು. ಬೇಗನೇ ಅವರ ಬಳಿಗೆ ಇಬ್ಬರು ವ್ಯಕ್ತಿಗಳನ್ನು ಕಳುಹಿಸು. ಅವರನ್ನು ಹಿಡಿದುಕೊಂಡು ನನ್ನ ಬಳಿ ಹಾಜರುಪಡಿಸು. ಆಗ ಯಮನಿನ ಅಧಿಕಾರಿಯಾದ ಬಾಜ್ಞಾನ್ ಒಬ್ಬ ಸೇನಾಧಿಪತಿ ಮತ್ತು ಒಬ್ಬ ಕುದುರೆ ಸವಾರರನನ್ನು ಹಝ್ರತ್ ಪೈಗಂಬರ್(ಸ)ರ ಕಡೆಗೆ ಕಳುಹಿಸಿದರು. ಅದರೊಂದಿಗೆ ಒಂದು ಪತ್ರವನ್ನು ಕೂಡ ಬರೆದನು. ಈ ಪತ್ರ ಲಭಿಸಿದ ಕೂಡಲೇ ನೀವು ಬೇಗನೇ ಈ ಇಬ್ಬರ ಜೊತೆಗೆ ಕಿಸ್ರಾನ ಅರಮನೆಯಲ್ಲಿ ಹಾಜರಾಗಿರಿ ಎಂದು ಅದರಲ್ಲಿ ಹಝ್ರತ್ ಪೈಗಂಬರ್(ಸ)ರೊಡನೆ ಹೇಳಲಾಗಿತ್ತು. ಆ ಸೇನಾಧಿಪತಿ ಮೊದಲು ಮಕ್ಕದ ಕಡೆಗೆ ಹೋದನು. ತಾಯಿಫಿನ ಸಮೀಪ ತಲುಪಿದಾಗ, ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಇರುತ್ತಾರೆ ಎಂದು ಅವನಿಗೆ ಗೊತ್ತಾಯಿತು. ಹೀಗೆ ಅವನು ಅಲ್ಲಿಂದ ಮದೀನಕ್ಕೆ ಹೋದನು. ಮದೀನಕ್ಕೆ ತಲುಪಿ ಅವನು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದನು: ನಿಮ್ಮನ್ನು ಹಿಡಿದುಕೊಂಡು ಕಿಸ್ರಾನ ಬಳಿಗೆ ಕೊಂಡಹೋಗಲು ಯಮನಿನ ಗವರ್ನರ್ ಆದ ಬಾಜ್ಞಾನಿಗೆ ಅವನು ಆದೇಶ ನೀಡಿದ್ದಾನೆ. ನೀವು ಈ ಆದೇಶವನ್ನು ನಿರಾಕರಿಸಿದರೆ, ಅವನು ನಿಮ್ಮನ್ನು ಮತ್ತು ನಿಮ್ಮ ಸಮುದಾಯವನ್ನು ಕೂಡ ನಾಶಮಾಡುವನು ಹಾಗೂ ನಿಮ್ಮ ದೇಶವನ್ನು ನಾಶ ಮಾಡುವನು. ಆದ್ದರಿಂದ ನೀವು ಖಂಡಿತ ನಮ್ಮ ಜೊತೆಗೆ ಬನ್ನಿರಿ. ಹಝ್ರತ್ ಪೈಗಂಬರ್(ಸ) ಈ ಮಾತನ್ನು ಕೇಳಿ ಹೀಗೆ ಹೇಳಿದರು: ಸರಿ, ನೀವು ನಾಳೆ ಮತ್ತೊಮ್ಮೆ ನನ್ನನ್ನು ಭೇಟಿಯಾಗಿರಿ. ರಾತ್ರಿ ಹಝ್ರತ್ ಪೈಗಂಬರ್(ಸ) ಅಲ್ಲಾಹನಲ್ಲಿ ದುಆ ಮಾಡಿದರು. ಕಿಸ್ರಾ ತೋರಿಸಿದ ಅಗೌರವಕ್ಕೆ ಶಿಕ್ಷೆಯಾಗಿ ಅಲ್ಲಾಹನು ಅವನ ಮಗನನ್ನೇ ಅವನ ವಿರುದ್ಧ ಇರಿಸಿದ್ದಾನೆ ಎಂಬ ಭವಿಷ್ಯವಾಣಿಯನ್ನು ಪ್ರತಾಪಶಾಲಿಯಾದ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿದನು.

ಹೀಗೆ ಅದೇ ವರ್ಷ ಜಮಾದಿಲ್ ಊಲ ಹತ್ತನೇ ದಿನಾಂಕ ಸೋಮವಾರದಂದು ಅವನನ್ನು ಕೊಲ್ಲಲಾಗುವುದು ಎಂದು ಭವಿಷ್ಯ ನುಡಿಯಲಾಯಿತು. ಇಂದು ರಾತ್ರಿ ಅವನನ್ನು ವಧಿಸಲಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಕೆಲವು ವರದಿಗಳು ಇವೆ. ಆ ರಾತ್ರಿ ಜಮಾದಿಲ್ ಊಲದ ರಾತ್ರಿಯಾಗಿರಲೂ ಬಹುದು. ಬೆಳಿಗ್ಗೆಯಾದಾಗ

ಹಝ್ರತ್ ಪೈಗಂಬರ್(ಸ) ಅವರಿಬ್ಬರನ್ನೂ ಕರೆದರು ಮತ್ತು ಅವರೊಡನೆ ಈ ಭವಿಷ್ಯವಾಣಿಯ ಸುದ್ದಿ ತಿಳಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಬಾಜ಼ಾನಿಗೆ ಹೀಗೆ ಪತ್ರ ಬರೆದರು: ಕಿಸ್ರಾ ಇಂತಿಂತಹ ತಿಂಗಳ ಇಂತಿಂತಹ ದಿನಾಂಕದಂದು ಕೊಲ್ಲಲ್ಪಡುವನು ಎಂದು ಅಲ್ಲಾಹನು ನನಗೆ ತಿಳಿಸಿದ್ದಾನೆ. ಈ ಪತ್ರ ಯಮನಿನ ಗವರ್ನರಿಗೆ ತಲುಪಿದಾಗ ಅವನು ಹೀಗೆ ಹೇಳಿದನು: ಇವರು ಸತ್ಯ ಪ್ರವಾದಿಯಾಗಿರುವರು ಎಂದಾದರೆ, ಹಾಗೆಯೇ ಆಗುವುದು. ಇಲ್ಲವೆಂದಾದರೆ, ಅವರ ಮತ್ತು ಅವರ ದೇಶದ ಗತಿ ಕೆಟ್ಟದಾಗುವುದು. ಕೆಲವೇ ದಿನಗಳ ನಂತರ ಇರಾನಿನ ಒಂದು ಹಡಗು ಯಮನಿನ ತೀರ ಪ್ರದೇಶದಲ್ಲಿ ಬಂತು ಮತ್ತು ಗವರ್ನರಿಗೆ ಇರಾನಿನ ಅರಸನ ಪತ್ರವನ್ನು ನೀಡಲಾಯಿತು. ಅದರ ಮೊಹರನ್ನು ನೋಡಿಕೊಂಡು ಯಮನಿನ ಗವರ್ನರ್ ಹೀಗೆ ಹೇಳಿದನು: ಮದೀನದ ಪ್ರವಾದಿ ಸತ್ಯ ಹೇಳಿದ್ದರು. ಇರಾನಿನ ಆಡಳಿತ ಬದಲಾಗಿದೆ. ಈ ಪತ್ರದಲ್ಲಿ ಬೇರೊಂದು ಅರಸನ ಮುದ್ರೆಯಿದೆ. ಆ ಪತ್ರವನ್ನು ಅವನು ತೆರೆದಾಗ ಅದರಲ್ಲಿ ಹೀಗೆ ಬರೆಯಲಾಗಿತ್ತು: ಇರಾನಿನ ಶೀರೋಯನ ಕಡೆಯಿಂದ ಬಾಜ಼ಾನಿನ ಗವರ್ನರ್ ಕಡೆಗೆ ಈ ಪತ್ರವನ್ನು ಬರೆಯಲಾಗಿದೆ. ನಾನು ನನ್ನ ತಂದೆಯಾದ ಹಿಂದಿನ ಅರಸನನ್ನು ವಧಿಸಿದ್ದೇನೆ. ಏಕೆಂದರೆ, ಅರಸನು ದೇಶದಲ್ಲಿ ರಕ್ತಪಾತದ ಬಾಗಿಲನ್ನು ತೆರೆದಿದ್ದನು. ದೇಶದ ಸಭ್ಯರನ್ನು ಅರಸನು ಕೊಲ್ಲುತ್ತಿದ್ದನು ಮತ್ತು ಪ್ರಜೆಗಳ ಮೇಲೆ ದೌರ್ಜನ್ಯ ಮಾಡುತ್ತಿದ್ದನು. ನನ್ನ ಪತ್ರ ನಿನ್ನ ಬಳಿಗೆ ತಲುಪಿದ ಕೂಡಲೇ ಎಲ್ಲ ಅಧಿಕಾರಿಗಳಿಂದ ನನ್ನ ಅನುಸರಣೆಯ ಪ್ರತಿಜ್ಞೆಯನ್ನು ಪಡೆ. ಇದಕ್ಕಿಂತ ಮುಂಚೆ ನನ್ನ ತಂದೆ ಅರೇಬಿಯದ ಒಬ್ಬ ಪ್ರವಾದಿಯನ್ನು ಬಂಧಿಸಲು ನೀಡಿದ ಆದೇಶವನ್ನು ರದ್ದುಗೊಳಿಸಲಾಗಿದೆ ಎಂದು ತಿಳಿದುಕೊ. ಆ ಪತ್ರವನ್ನು ಓದಿ ಬಾಜ಼ಾನ್ ಎಷ್ಟು ಪ್ರಭಾವಿತನಾದನು ಎಂದರೆ, ಅವನು ಮತ್ತು ಅವನ ಜೊತೆಗಾರರು ಕೂಡಲೇ ಮುಸ್ಲಿಮರಾದರು. ತಾನು ಮುಸ್ಲಿಮನಾದ ವಿವರವನ್ನು ಅವನು ಹಝ್ರತ್ ಪೈಗಂಬರ್(ಸ)ರಿಗೆ ತಲುಪಿಸಿದರು.

ತಫ್ಸೀರುಲ್ ಕಬೀರಿನ ಇಂಟ್ರೋಡಕ್ಷನಿನಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ವಿವರಣೆಯನ್ನು ಬರೆದಿರುವರು.

ಬಾಜ಼ಾನ್ ಮೃತಪಟ್ಟಾಗ ಹಝ್ರತ್ ಪೈಗಂಬರ್(ಸ) ತನ್ನ ಅಮೀರರನ್ನು ಯಮನಿನ ವಿವಿಧ ಪ್ರದೇಶಗಳ ಅಧಿಕಾರಿಗಳನ್ನಾಗಿ ಮಾಡಿದರು. ಮುಆಧ್ ಬಿನ್ ಜಬಲ್(ರ) ಯಮನ್ ಮತ್ತು ಹಝ್ರೆ ಮೌತಿನ ಸಂಪೂರ್ಣ ಪ್ರದೇಶಗಳ ಮುಅಲ್ಲಿಂ ಆಗಿದ್ದರು. ಆದ್ದರಿಂದ ಅವರು ಈ ಎಲ್ಲ ಪ್ರದೇಶಗಳಿಗೆ ಹೋಗುತ್ತಿದ್ದರು. ಯಮನಿನ ದಕ್ಷಿಣ ಭಾಗದಲ್ಲಿ ನೆಲೆಸಿದ್ದ ಕಣಿಗಾರನಾದ ಅಸ್ವದ್ ತನ್ನ ಜಾದೂಗಾರಿಕೆ ಮತ್ತು ಕಾವ್ಯ ರೀತಿಯ ಮಾತುಗಾರಿಕೆಯಿಂದ ಬೇಗನೇ ಜನರ ಗಮನವನ್ನು ತನ್ನ ಕಡೆಗೆ ಸೆಳೆದಿದ್ದನು ಮತ್ತು ಪ್ರವಾದಿತ್ವದ ವಾದವನ್ನು ಕೂಡ ಮಾಡಿದ್ದನು. ಅವನ ಬಳಿಗೆ ಒಬ್ಬ ದೇವದೂತನು ಬಂದು ಪ್ರತಿಯೊಂದು ಸಂಗತಿಯನ್ನು ಹೇಳುತ್ತಾನೆ ಹಾಗೂ ಶತ್ರುಗಳ ಸಂಚು ಮತ್ತು ಯೋಜನೆಗಳನ್ನು ಬಯಲು ಮಾಡುತ್ತಾನೆ ಎಂದು ಅವನು ಹೇಳುತ್ತಿದ್ದನು. ಇದರಿಂದ ಮೂಢರಾದ ಸಾಮಾನ್ಯ ಜನರಲ್ಲಿ ಅನೇಕರು ಅವನ ಸುತ್ತ ಒಟ್ಟುಗೂಡಿದರು. ಯಮನ್ ಕೇವಲ ಯಮನ್ ನಿವಾಸಿಗಳದ್ದಾಗಿದೆ ಎಂಬ ಘೋಷಣೆಯನ್ನು ಕೂಡ ಅವನು ಕೂಗಿದ್ದನು. ಇದರಿಂದ ಯಮನಿನ ನಿವಾಸಿಗಳು ಕೋಮುವಾದದ ಈ ಘೋಷಣೆಯಿಂದ ಬಹಳ ಪ್ರಭಾವಿತರಾದರು. ಇದು ಬಹಳ ಪ್ರಾಚೀನವಾದ ಘೋಷಣೆಯಾಗಿದೆ. ಆದರೆ ಈಗಲೂ ಇದೇ ರೀತಿಯ ಘೋಷಣೆ ಉಪಯೋಗಿಸಲಾಗುತ್ತದೆ. ಲೋಕದಲ್ಲಿ ಹರಡಿರುವ ಗಲಭೆ ಇದೇ ಕಾರಣದಿಂದಾಗಿದೆ. ಹೇಗಿದ್ದರೂ ಯಮನಿನ ಜನರು ಇಸ್ಲಾಮಿನ ಬಗ್ಗೆ ಅಲ್ಲಿಯ ವರೆಗೂ ಸರಿಯಾಗಿ ತಿಳಿವು ಗಳಿಸದ ಕಾರಣದಿಂದ, ಅಪರಿಚತರು ತಮ್ಮ ಮೇಲೆ ಮೇಲುಗೈ ಸಾಧಿಸುವುದರಿಂದ ಸ್ವತಂತ್ರಗೊಳ್ಳಲಿಕ್ಕಾಗಿ ಅವರು ಅಸ್ವದಿನ ಕೋಮುವಾದ ಘೋಷಣೆಗೆ ಬೆಂಬಲ ಕೊಟ್ಟರು ಮತ್ತು ಅವನೊಂದಿಗೆ ಸೇರಿಕೊಂಡರು.

ಈ ಚಿಂತಾಜನಕ ಮಾಹಿತಿಗಳು ಮದೀನಕ್ಕೆ ತಲುಪಿದ ಸಮಯದಲ್ಲಿ, ಮೌತಾ ಯುದ್ಧದಲ್ಲಿ ಹುತಾತ್ಮರಾದವರಿಗಾಗಿ ಪ್ರತೀಕಾರ ಮಾಡಲು ಮತ್ತು ಉತ್ತರ ದಿಕ್ಕಿನಿಂದ ಬರುವ ದಾಳಿಗಳನ್ನು ತಡೆಯಲಿಕ್ಕಾಗಿ ಹಝ್ರತ್ ಉಸಾಮ ಬಿನ್ ಝೈದ್‌ರ ಸೈನ್ಯವನ್ನು ತಯಾರಿಸುವುದರಲ್ಲಿ ಹಝ್ರತ್ ಪೈಗಂಬರ್(ಸ) ನಿರತರಾಗಿದ್ದರು. ಸ್ವತಃ ಅಸ್ವದಿನ ವಿರುದ್ಧದ ಹೋರಾಟವನ್ನು ಜಾರಿಯಲ್ಲಿರಿಸಲು ಯಮನಿನ ಸರದಾರರಿಗೆ ಹಝ್ರತ್ ಪೈಗಂಬರ್(ಸ) ಪತ್ರ ಬರೆದರು ಮತ್ತು ಉಸಾಮನ ಸೈನ್ಯ ವಿಜಯಶಾಲಿಯಾಗಿ ಮರಳಿದ ಕೂಡಲೇ ಅದನ್ನು ಯಮನಿನ ಕಡೆಗೆ ಕಳುಹಿಸಲಾಗುವುದು ಎಂದು ಹೇಳಿದರು. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–201, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಸೀರತ್ ಸಯ್ಯಿದುನಾ ಹಝ್‌ರತ್ ಅಬೂಬಕರ್ ಸಿದ್ದೀಖ್(ರ), ಅಬುನ್ನಸರ್ ಅನುವಾದ, ಪುಟ–571)

ಅಸ್ವದ್ ಅನ್ಸಿಯ ಸೇನೆಯಲ್ಲಿ ಏಳುನೂರು ಕುದುರೆಸವಾರರು ಇದ್ದರು. ಬಹಳ ಹಿರಿದಾದ ಸೈನ್ಯವನ್ನು ಅವನು ತಯಾರು ಮಾಡಿದ್ದನು. ಅದಲ್ಲದೇ ಒಂಟೆ ಸವಾರರು ಕೂಡ ಇದ್ದರು. ಅನಂತರ ಅವನ ಶಕ್ತಿ ಬಲಪಡುತ್ತಾ ಹೋಯಿತು. ಮಝ್‌ಹಜ್ ಗೋತ್ರದಲ್ಲಿ ಅಮ್ರ್ ಬಿನ್ ಮಹ್‌ದಿ ಕರ್‌ಬ್ ಅವನ ಪ್ರತಿನಿಧಿಯಾಗಿದ್ದನು. ಅಮ್ರ್ ಬಿನ್ ಮಹ್‌ದಿ ಕರ್ಬ್ ಯಮನನ ಪ್ರಸಿದ್ಧ ಕುದುರೆಸವಾರನಾಗಿದ್ದನು. ಅವನು ಕವಿಯೂ ಭಾಷಣಗಾರನೂ ಆಗಿದ್ದನು. ಅವನ ಉಪನಾಮ ಅಬೂಸೌರ್ ಎಂದಾಗಿತ್ತು. ಹಿಜರಿ 10ರಲ್ಲಿ ಅವನು ತನ್ನ ಗೋತ್ರವಾದ ಬನೂ ಝುಬೀದಿನ ಸಂಘದೊಂದಿಗೆ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದನು. ಅನಂತರ ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಧರ್ಮತ್ಯಾಗಿಯಾದನು. ಆದರೆ ಅನಂತರ ಪುನಃ ಸತ್ಯದ ಕಡೆಗೆ ಮರಳಿ ಬಂದಿದ್ದನು. ಖಾದಿಸಿಯ ಯುದ್ಧದಲ್ಲಿ ಹಿರಿದಾದ ಸಾಧನೆಯನ್ನು ಮಾಡಿದ್ದನು. ಹಝ್ರತ್ ಉಮರ್(ರ)ರ ಕೊನೆಯ ದಿನಗಳಲ್ಲಿ ಅವನು ಮೃತಪಟ್ಟಿದ್ದನು. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–166, 202, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ತಾರೀಖ್ ಅದಬ್ ಅರಬಿ, ಅನುವಾದ, ಪುಟ–67–68, ಗುಲಾಮ್ ಅಲಿ ಪ್ರಿಂಟರ್ಸ್ ಲಾಹೋರ್)

ಹೇಗಿದ್ದರೂ ಅಸ್ವದ್ ಅನ್ಸಿ ನಜ್ರಾನ್ ನಿವಾಸಿಗಳ ಮೇಲೆ ದಾಳಿ ನಡೆಸಿಕೊಂಡು ಹಝ್ರತ್ ಅಮ್ರ್ ಬಿನ್ ಹಜ಼ಮ್ ಮತ್ತು ಖಾಲಿದ್ ಬಿನ್ ಸಈದ್‌ರನ್ನು ಅಲ್ಲಿಂದ ಹೊರಕ್ಕೆ ಹಾಕಿದನು. ಅನಂತರ ಅವನು ಸುನಾದ ಮೇಲೆ ಆಕ್ರಮಣ ನಡೆಸಿದನು. ಅಲ್ಲಿ ಹಝ್ರತ್ ಶಹರ್ ಬಿನ್ ಬಾದ಼ಾನ್ ಆತನನ್ನು ಎದುರಿಸಿದರು. ಆದರೆ ಅವರು ಶಹೀದ್ ಆದರು. ಹಝ್ರತ್ ಮುಆಧ್ ಬಿನ್ ಜಬಲ್ ಆ ದಿನಗಳಲ್ಲಿ ಸುನ್‌ಅದಲ್ಲೇ ಇದ್ದರು. ಆದರೆ ಈ ಸ್ಥಿತಿಗತಿಗಳ ಕಾರಣದಿಂದ ಮುಆರಿಬಿನಲ್ಲಿ ಇದ್ದ ಹಝ್ರತ್ ಅಬುಮೂಸಾ(ರ)ರ ಬಳಿಗೆ ಹೋದರು. ಅಲ್ಲಿಂದ ಅವರಿಬ್ಬರೂ ಹಜ಼್ರೆ ಮೌತಿಗೆ ಹೋದರು. ಈ ರೀತಿಯಾಗಿ ಅಸ್ವದ್ ಅನ್ಸಿ ಯಮನಿನ ಸಂಪೂರ್ಣ ಪ್ರದೇಶವನ್ನು ವಶಪಡಿಸಿಕೊಂಡನು. ಹಝ್ರತ್ ಶಹರ್ ಬಿನ್ ಬಾದ಼ಾನ್(ರ) ಹುತಾತ್ಮರಾದ ನಂತರ ಅವರ ಪತ್ನಿಯನ್ನು ಅಸ್ವದ್ ಅನ್ಸಿ ಬಲವಂತವಾಗಿ ಮದುವೆ ಕೂಡ ಮಾಡಿದ್ದನು. ಅವಳ ಹೆಸರು ಮರ್ಝ್‌ಬಾನ ಅಥವಾ ಕೆಲವು ಗ್ರಂಥಗಳ ಪ್ರಕಾರ ಆಝಾದ್ ಎಂದಾಗಿತ್ತು. ಅದೇ ವೇಳೆ ಹಝ್ರೇ ಮೌತ್ ಮತ್ತು ಯಮನಿನ ಮುಸ್ಲಿಮರಿಗೆ ಹಝ್ರತ್ ಪೈಗಂಬರ್(ಸ)ರ ಪತ್ರ ಲಭಿಸಿತು. ಅದರಲ್ಲಿ ಅಸ್ವದ್ ಅನ್ಸಿಯೊಡನೆ ಯುದ್ಧ ಮಾಡಲು ಆದೇಶ ನೀಡಲಾಗಿತ್ತು. ಆದ್ದರಿಂದ ಈ ಉದ್ದೇಶಕ್ಕಾಗಿ ಹಝ್ರತ್ ಮುಆಧ್ ಬಿನ್ ಜಬಲ್(ರ) ಎದ್ದುನಿಂತರು. ಇದರಿಂದ ಮುಸ್ಲಿಮರ ಹೃದಯಗಳು ಬಲಗೊಂಡುವು. ಜುಶೈಶ್ ದೈಲಮಿ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಪತ್ರವನ್ನು ತೆಗೆದುಕೊಂಡು ವಬರ್ ಬಿನ್ ಯುಹನ್ನಿಸ್(ರ) ನಮ್ಮ ಬಳಿಗೆ ಬಂದರು. ನಾವು ನಮ್ಮ ಧರ್ಮದಲ್ಲಿ ಸ್ಥಿರರಾಗಿರಲು ಮತ್ತು ಹೋರಾಟ ಅಥವಾ ತಂತ್ರದಿಂದ ಅಸ್ವದ್ ಅನ್ಸಿಯ ವಿರುದ್ಧ ಯುದ್ಧ ಕಾರ್ಯಾಚರಣೆ ನಡೆಸಲು ಹಾಗೂ ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ಇಸ್ಲಾಮಿನಲ್ಲಿ ಸ್ಥಿರರಾಗಿರುವ ಮತ್ತು ಧರ್ಮದ ನೆರವಿಗಾಗಿ ತಯಾರಾಗಿರುವ ಜನರಿಗೆ ತಲುಪಿಸಲು ಆ ಪತ್ರದಲ್ಲಿ ಆದೇಶ ನೀಡಲಾಗಿತ್ತು. ನಾವು ಅದನ್ನು ಪಾಲಿಸಿದೆವು. ಆದರೆ ಅಸ್ವದ್ ಅನ್ಸಿಯ ವಿರುದ್ಧ ವಿಜಯ ಸಾಧಿಸುವುದು ಬಹಳ ಕಷ್ಟಕರವೆಂದು ನಮಗೆ ಗೊತ್ತಾಯಿತು.
(ತಾರೀಖ್ ಅತ್ತಬರಿ, ಸಂಪುಟ–2, ಪುಟ–248, ದಾರುಲ್ ಕುತುಬ್ ಅಲ್‌ಇಲ್‌ಮಿಯ ಬೈರೂತ್ 2012) (ತಬಖಾತುಲ್ ಕುಬ್ರ, ಭಾಗ–6, ಪುಟ–62–63, ದಾರುಲ್ ಕುತುಬ್ ಅಲ್‌ಇಲ್ಮಿಯ ಬೈರೂತ್ 2017) (ಅಸದುಲ್‌ಗಾಬ, ಸಂಪುಟ–5, ಪುಟ–408, ದಾರುಲ್ ಕುತುಬ್ ಇಲ್‌ಮಿಯ 2016)

ಜುಶೈಶ್ ದೈಲಮಿ ಹೇಳುತ್ತಾರೆ: ಅಸ್ವದ್ ಅನ್ಸಿ ಮತ್ತು ಅಮ್ರ್ ಬಿನ್ ಮಅ್‌ದಿಯ ಸಹೋದರಿ ಪುತ್ರನಾದ ಖೈಸ್ ಬಿನ್ ಅಬ್ದ್ ಯಗೂ಼ಶ್ ಬಿನ್ ಮಕ್‌ಶೂಹ್‌ನ ನಡುವೆ ಸ್ವಲ್ಪ ಒಡಕು ಉಂಟಾಗಿದೆ ಎಂದು ನಮಗೆ ತಿಳಿದುಬಂತು. ಆತನ ಜೀವಕ್ಕೆ ಅಪಾಯವಿದೆ ಎಂಬುದನ್ನು ಯೋಚಿಸಿ ನಾವು ಆತನನ್ನು ಇಸ್ಲಾಮಿನ ಕಡೆಗೆ ಆಹ್ವಾನಿಸಿದೆವು ಮತ್ತು ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ತಲುಪಿಸಿದೆವು. ನಾವು ಆಕಾಶದಿಂದ ಇಳಿದು ಬಂದೆವೋ ಎಂಬಂತೆ ಆತನಿಗೆ ಅನುಭವವಾಯಿತು. ಆದ್ದರಿಂದ ಬೇಗನೇ ಆತನು ನಮ್ಮ ಮಾತನ್ನು ಒಪ್ಪಿಕೊಂಡನು. ಅದರೊಂದಿಗೆ ನಾವು ಇತರ ಜನರೊಡನೆ ಕೂಡ ಪತ್ರ ವ್ಯವಹಾರ ನಡೆಸಿದೆವು. ವಿವಿಧ ಗೋತ್ರಗಳ ನಾಯಕರು ಕೂಡ ಅಸ್ವದ್ ಅನ್ಸಿಯನ್ನು ಎದುರಿಸಲು ತಯಾರಾಗಿದ್ದರು.

ಅವರು ನಮಗೆ ಸಹಾಯ ಮಾಡುವುದಾಗಿ ಪತ್ರದ ಮೂಲಕ ತಿಳಿಸಿದರು. ಅದಕ್ಕೆ ಮರುತ್ತರವಾಗಿ ನಾವು ಹೀಗೆ ಅವರಿಗೆ ಬರೆದೆವು: ಎಲ್ಲಿಯ ವರೆಗೆ ನಾವು ಕೊನೆಯ ತೀರ್ಮಾನ ಮಾಡಿಕೊಂಡು ಉತ್ತರಿಸುವುದಿಲ್ಲವೋ ಅಲ್ಲಿಯ ವರೆಗೆ ನೀವು ನಿಮ್ಮ ಜಾಗವನ್ನು ಬಿಟ್ಟು ಹೋಗಬೇಡಿರಿ. ಏಕೆಂದರೆ ಹಝ್ರತ್ ಪೈಗಂಬರ್(ಸ)ರ ಸಂದೇಶ ಲಭಿಸಿದ ಕಾರಣದಿಂದ ಅಸ್ವದಿನ ವಿರುದ್ಧ ಕಾರ್ಯಾಚರಣೆ ನಡೆಸುವುದು ಆವಶ್ಯವಾಗಿತ್ತು. ಅದೇ ರೀತಿಯಲ್ಲಿ ನಜ್ರಾನಿನ ಎಲ್ಲ ನಿವಾಸಿಗಳಿಗೆ ಅಸ್ವದ್ ಅನ್ಸಿಯ ವಿಷಯದ ಕುರಿತು ಹಝ್ರತ್ ಪೈಗಂಬರ್(ಸ) ಬರೆದಿದ್ದರು. ಅವರೆಲ್ಲರೂ ಹಝ್ರತ್ ಪೈಗಂಬರ್(ಸ)ರ ಮಾತನ್ನು ಒಪ್ಪಿಕೊಂಡರು. ಈ ಮಾಹಿತಿ ಅಸ್ವದ್ ಅನ್ಸಿಗೆ ತಲುಪಿದಾಗ ಅವನಿಗೆ ತನ್ನ ನಾಶದ ಅರಿವಾಗಲು ಶುರುವಾಯಿತು.

ಜುಶೈಶ್ ದೈಲಮಿ ಹೇಳುತ್ತಾರೆ: ನನಗೆ ಒಂದು ಉಪಾಯ ಹೊಳೆಯಿತು. ನಾನು ಅಸ್ವದ್ ಅನ್ಸಿಯ ಪತ್ನಿಯಾದ ಆಝಾದಿನ ಬಳಿಗೆ ಹೋದೆನು. ಅಸ್ವದಿನ ಕೈಗಳಿಂದ ಅವಳ ಹಿಂದಿನ ಪತಿಯಾದ ಹಝ್ರತ್ ಶಹರ್ ಬಿನ್ ಬಾಝಾನ್(ರ) ಹುತಾತ್ಮರಾದದ್ದು, ಅವಳ ಕುಟುಂಬದ ಇತರ ಸದಸ್ಯರು ವಧಿಸಲ್ಪಟ್ಟದ್ದು ಮತ್ತು ಕುಟುಂಬಕ್ಕೆ ಉಂಟಾದ ಅವಮಾನ ಹಾಗೂ ದೌರ್ಜನ್ಯಗಳ ಬಗ್ಗೆ ಅವಳಿಗೆ ನೆನಪಿಸಿ ಕೊಟ್ಟೆನು ಮತ್ತು ಅಸ್ವದ್ ಅನ್ಸಿಯ ವಿರುದ್ಧ ಸಹಾಯಕ್ಕಾಗಿ ಬೇಡಿಕೊಂಡೆನು. ಆಗ ಅವಳು ಬಹಳ ಸಂತೋಷದಿಂದ ಅದಕ್ಕೆ ತಯಾರಾದಳು. ಅವಳು ಹೇಳಿದಳು: ಅಲ್ಲಾಹನಾಣೆ, ನಾನು ಅಸ್ವದನ್ನು ಅಲ್ಲಾಹನ ಸೃಷ್ಟಿಗಳಲ್ಲಿ ಅತ್ಯಂತ ಕೆಟ್ಟವನು ಎಂದು ಭಾವಿಸುತ್ತೇನೆ. ಅವನು ಅಲ್ಲಾಹನಿಗೆ ಸಲ್ಲಬೇಕಾದ ಯಾವುದೇ ಕರ್ತವ್ಯಗಳಿಗೆ ಗೌರವ ಕೊಡುವುದಿಲ್ಲ ಮತ್ತು ಅವನು ಅಲ್ಲಾಹನು ನಿಷಿದ್ಧಗೊಳಿಸಿದ ಯಾವುದೇ ಕಾರ್ಯಗಳಿಂದ ದೂರವಿರುವುದಿಲ್ಲ. ನೀವು ಈ ಕೃತ್ಯವನ್ನು ಮಾಡಲು ಉದ್ದೇಶಿಸುವಾಗ ನನಗೆ ತಿಳಿಸಿರಿ. ನಾನು ಈ ವಿಷಯದಲ್ಲಿ ಯೋಜನೆ ನಡೆಸುತ್ತೇನೆ. ಕೊನೆಗೆ ಒಂದು ಸಂಪೂರ್ಣ ಯೋಜನೆ ಮತ್ತು ಅಸ್ವದ್ ಅನ್ಸಿಯ ಪತ್ನಿಯ ಸಹಾಯದೊಂದಿಗೆ ಅಸ್ವದ್ ಅನ್ಸಿಯನ್ನು ಒಂದು ರಾತ್ರಿ ಅವನ ಅರಮನೆಗೆ ನುಗ್ಗಿ ವಧಿಸಲಾಯಿತು. ಬೆಳಿಗ್ಗೆಯಾದಾಗ ಕೋಟೆಯ ಗೋಡೆಯ ಮೇಲೆ ನಿಂತುಕೊಂಡು ಪ್ರತ್ಯೇಕವಾದ ರೀತಿಯಲ್ಲಿ ಘೋಷಣೆ ಮಾಡಲಾಯಿತು. ಧರ್ಮತ್ಯಾಗಿ ದಂಗೆಗಾರ ಅಸ್ವದಿನ ಕೊನೆಯಾಯಿತು ಎಂದು ಹೇಳಲಾಯಿತು. ಆಗ ಮುಸ್ಲಿಮರು ಮತ್ತು ಕಾಫಿರ್‌ಗಳು ಕೋಟೆಯ ಸುತ್ತಮುತ್ತ ಒಟ್ಟುಗೂಡಿದರು. ಅನಂತರ ಅವರು ಬೆಳಿಗ್ಗಿನ ಅಧಾನ್ ನೀಡಿದರು ಮತ್ತು ಅವಳು ಹೀಗೆ ಹೇಳಿದಳು: **ಅಶ್‌ಹದು ಅನ್ನ ಮುಹಮ್ಮದರ್‍ರಸೂಲುಲ್ಲಾಹ್**. ಎಂದರೆ ಮುಹಮ್ಮದ್(ಸ) ಅಲ್ಲಾಹನ ಪ್ರವಾದಿಯಾಗಿರುವರು ಎಂದು ನಾನು ಸಾಕ್ಷ್ಯವಹಿಸುತ್ತೇನೆ. ಅಸ್ವದ್ ಅನ್ಸಿ ಸುಳ್ಳುಗಾರನಾಗಿದ್ದಾನೆ. ಅನಂತರ ಅವನ ತಲೆಯನ್ನು ಅವಳು ಜನರ ಮುಂದೆ ಬಿಸಾಕಿದಳು. ಈ ರೀತಿಯಾಗಿ ಮೂರು ತಿಂಗಳ ತನಕ ಅಥವಾ ನಾಲ್ಕು ತಿಂಗಳ ವರೆಗೆ ಹೊತ್ತಿದ ಈ ಪಿತೂರಿ ನಂದಿ ಹೋಯಿತು. ಎಲ್ಲ ಹುದ್ದೇದಾರರು ಮತ್ತು ನೇತಾರರು ತಮ್ಮ ತಮ್ಮ ಪ್ರದೇಶಗಳಲ್ಲಿ ಎಂದಿನಂತೆ ಕೆಲಸಗಳಲ್ಲಿ ನಿರತರಾದರು. ಹಝ್ರತ್ ಮುಆಧ್ ಬಿನ್ ಜಬಲ್(ರ) ಆ ಜನರಿಗೆ ಇಮಾಮತ್ ವಹಿಸುತ್ತಿದ್ದರು. ಅಸ್ವದ್ ಅನ್ಸಯ ವಧೆ, ಅವನ ಸೈನ್ಯದ ಸೋಲು ಮತ್ತು ಆ ಪಿತೂರಿಯ ಕೊನೆಯ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಲಾಯಿತು. ಸುದ್ದಿ ತಲುಪುವುದಕ್ಕೆ ಮುಂಚಿತವಾಗಿ ಹಝ್ರತ್ ಪೈಗಂಬರ್(ಸ) ನಿಧನಗೊಂಡಿದ್ದರು. ಅವನು ಕೊಲ್ಲಲ್ಪಟ್ಟ ಸುದ್ದಿಯನ್ನು ಅಲ್ಲಾಹನು ದಿವ್ಯವಾಣಿ ಮೂಲಕ ಅದೇ ರಾತ್ರಿ ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿದ್ದನು ಎಂದೂ ವರದಿಗಳಲ್ಲಿ ಇದೆ. ಮರುದಿನ ಬೆಳಿಗ್ಗೆ ಆ ಸುದ್ದಿಯನ್ನು ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೂ ತಿಳಿಸಿದ್ದರು. ಅವನನ್ನು ಫೀರೋಝ್ ಕೊಂದು ಹಾಕಿದನು ಎಂದೂ ಹೇಳಿದರು. ಹಝ್ರತ್ ಅಬೂಬಕರ್(ರ) ಖಿಲಾಫತ್ ಸ್ಥಾನವನ್ನು ಏರಿದ ನಂತರ ಲಭಿಸಿದ ಮೊತ್ತಮೊದಲಿನ ಸುವಾರ್ತೆಯು ಅಸ್ವದ್ ಅನ್ಸಿಯ ಕೊಲೆಯ ಸುವಾರ್ತೆಯಾಗಿತ್ತು. ಅಸ್ವದ್ ಅನ್ಸಿಯ ಕೊಲೆಯ ಸುದ್ದಿ ಲಭಿಸಿದ ರಾತ್ರಿಯ ಮರುದಿನ ಹಝ್ರತ್ ಪೈಗಂಬರ್(ಸ) ನಿಧನರಾದರು ಎಂದೂ ವರದಿಯಿದೆ. ಒಂದು ವರದಿಯ ಪ್ರಕಾರ ಅಸ್ವದ್ ಅನ್ಸಿಯ ಕೊಲೆಯ ಸುದ್ದಿ ಮದೀನಕ್ಕೆ ತಲುಪಿದಾಗ ಹಝ್ರತ್ ಪೈಗಂಬರ್(ಸ)ರನ್ನು ದಫನ್ ಮಾಡಲಾಗುತ್ತಿತ್ತು. ಒಂದು ವರದಿಯ ಪ್ರಕಾರ ಅಸ್ವದಿನ ಕೊಲೆಯ ವಾರ್ತೆ ಹಝ್ರತ್ ಪೈಗಂಬರ್(ಸ)ರ ನಿಧನದ ಹತ್ತು ಹನ್ನೆರಡು ದಿನಗಳ ನಂತರ ಮದೀನಕ್ಕೆ ತಲುಪಿತ್ತು. ಆಗ ಹಝ್ರತ್ ಅಬೂಬಕರ್(ರ) ಖಲೀಫರಾಗಿ ಆಯ್ಕೆಗೊಂಡಿದ್ದರು. ಇದರ ಕುರಿತು ಅನೇಕ ವರದಿಗಳಿವೆ. ಹೇಗಿದ್ದರೂ ಇದು ಆ ದಿನಗಳಲ್ಲಿ ನಡೆದ ಸಂಗತಿಯಾಗಿದೆ. ಎಂಟು ಹತ್ತು ದಿನಗಳ ಹಿಂದೆ ಅಥವಾ ನಂತರ.

ಅನಂತರ ಸುನ್‌ಅದಲ್ಲಿ ಮೊದಲಿನಂತೆ ಮುಸ್ಲಿಮರ ಆಡಳಿತ ಸ್ಥಾಪಿತಗೊಂಡಿತು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–5, ಪುಟ–404–405, ದಾರುಲ್ ಕುತುಬ್ ಇಲ್‌ಮಿಯ 2005) (ಹಝ್ರತ್ ಅಬೂಬಕರ್(ರ) ಕೆ ಸರ್ಕಾರಿ ಖುತೂತ್, ಖುರ್ಷೀದ್ ಅಹ್ಮದ್ ಫಾರೂಖ್, ಪುಟ–60, ಜಾವೇದ್ ಬಟ್ ಪ್ರೆಸ್) (ಅಲ್‌ಕಾಮಿಲ್ ಫಿತ್ತಾರೀಖ್ ಲಿಇಬ್ನೆ ಅಸೀರ್, ಸಂಪುಟ–2, ಪುಟ–201–204, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006)

ಆದರೆ ಯಮನಿನಲ್ಲಿ ಪುನಃ ಒಂದು ಬಾರಿ ದಂಗೆಯೆದ್ದಿತು.

ಹಝ್ರತ್ ಪೈಗಂಬರ್(ಸ) ನಿಧನರಾದ ಚರ್ಚೆ ನಡೆದಾಗ ಸುಧಾರಿಸುತ್ತಾ ಇದ್ದ ಅವಸ್ಥೆಗಳು ಪುನಃ ಹಾಳಾಯಿತು. ಯೋಗ್ಯನೂ ತೀವ್ರ ಕೋಮುವಾದಿಯೂ ಆದ ಖೈಸ್ ಬಿನ್ ಅಬ್ದ್ ಯಗೂಸ್ ಪುನಃ ಇಸ್ಲಾಮಿನೊಂದಿಗೆ ಇರಿಸಿದ್ದ ನಿಷ್ಠೆಯಿಂದ ಮುಖ ತಿರುಗಿಸಿದನು. ಯಮನಿನಲ್ಲಿ ಇರಾನಿಯರ ಅಧಿಕಾರವು ಅವನನ್ನು ಚಿಂತಿತಗೊಳಿಸುತ್ತಿತ್ತು. ಅದನ್ನು ಕೊನೆಗೊಳಿಸಿದ ನಂತರ ಅಬ್ನಾರ ಕ್ಷೇಮ, ಅವರ ಒಗ್ಗಟ್ಟು ಹಾಗೂ ಅಧಿಕಾರದ ಮೇಲುಗೈಯನ್ನು ಮಣ್ಣುಪಾಲುಗೊಳಿಸಲು ಅವನು ಬಯಸುತ್ತಿದ್ದನು. ಅವನು ಮೊದಲೇ ಒಬ್ಬ ಯಶಸ್ವಿ ಸೇನಾಧಿಪತಿಯಾಗಿದ್ದನು. ಅವನು ಅಸ್ವದಿನ ಸೇನಾಧಿಪತಿಗಳೊಂದಿಗೆ ಒಳಸಂಚು ಮಾಡಿದನು ಮತ್ತು ಅಬ್ನಾರನ್ನು ದೇಶದಿಂದ ಹೊರಗೆ ಹಾಕಲು ಯೋಜನೆ ಮಾಡಿಕೊಂಡನು. ಫೀರೋಝ್ ಮತ್ತು ದಾಧ್‌ವಿಯ ಇಬ್ಬರೊಂದಿಗೂ ಅವನು ಸಂಬಂಧವನ್ನು ಹಾಳುಗೊಳಿಸಿದನು. ದಾಧ್‌ವಿಯನನ್ನು ಮೋಸದಿಂದ ಅವನು ಕೊಲೆ ಮಾಡಿದನು. ಆದರೆ ಫೀರೋಝ್ ಕೂದಲು ಅಂತರದಲ್ಲಿ ಪರಾರಿಯಾದನು. ತನ್ನ ಮತ್ತು ಅಬ್ನಾರ ನಿಷ್ಠೆಯ ಕುರಿತು ತಿಳಿಸಿಕೊಂಡು ಫೀರೋಝ್ ಹಝ್ರತ್ ಅಬೂಬಕರ್(ರ)ರೊಡನೆ ಹೀಗೆ ವಿನಂತಿಸಿಕೊಂಡರು: ನಮಗೆ ಸಹಾಯ ನೀಡಿರಿ ಮತ್ತು ನಾವು ಇಸ್ಲಾಮಿಗಾಗಿ ಎಲ್ಲ ತ್ಯಾಗಗಳನ್ನು ಮಾಡಲು ತಯಾರಿದ್ದೇವೆ. (ಹಝ್ರತ್ ಅಬೂಬಕರ್(ರ) ಕೆ ಸರ್ಕಾರಿ ಖುತೂತ್, ಖುರ್ಷೀದ್ ಅಹ್ಮದ್ ಫಾರೂಖ್, ಪುಟ–60–61, ಜಾವೇದ್ ಭಟ್ ಪ್ರೆಸ್)

ಹಝ್ರತ್ ಪೈಗಂಬರ್(ಸ) ನಿಧನರಾದ ಸಮಯದಲ್ಲಿ ಹಝ್ರೆ ಮೌತಿನ ಪ್ರದೇಶಗಳಲ್ಲಿ ಹಝ್ರತ್ ಪೈಗಂಬರ್(ಸ) ನೇಮಿಸಿದ ಅಧಿಕಾರಿಯಾಗಿ ಝಿಯಾದ್ ಬಿನ್ ಲುಬೇದ್ ಇದ್ದರು. ಝಿಯಾದ್ ಬಿನ್ ಲುಬೇದ್(ರ) ಹಝ್ರತ್ ಪೈಗಂಬರ್(ಸ)ರ ಸಹಾಬಿಯಾಗಿದ್ದರು. ಹಝ್ರತ್ ಝಿಯಾದಿನ ಒಬ್ಬ ಮಗನು ಅಬ್ದುಲ್ಲಾಹ್ ಎಂದಾಗಿತ್ತು. ಎರಡನೇ ಬೈಅತ್ತಾದ ಉಖ್ಬ ಸಾನಿಯದಲ್ಲಿ ಎಪ್ಪತ್ತು ಸಹಾಬಿಯರ ಜೊತೆಗೆ ಹಝ್ರತ್ ಪೈಗಂಬರ್(ಸ)ರ ಬಳಿ ಅವರು ಹಾಜರಾಗಿದ್ದರು ಮತ್ತು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದರು. ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ ನಂತರ ಅವರು ಮದೀನಕ್ಕೆ ಮರಳಿ ಬಂದಾಗ ಅವರು ಬಂದ ಕೂಡಲೇ ತನ್ನ ಗೋತ್ರವಾದ ಬನೂ ಬಿಯಾಝುದ ವಿಗ್ರಹವನ್ನು ಒಡೆದರು. ಅನಂತರ ಹಝ್ರತ್ ಪೈಗಂಬರ್(ಸ)ರ ಬಳಿಗೆ ಮಕ್ಕಕ್ಕೆ ಬಂದರು. ಅಲ್ಲೇ ತಂಗಿದರು. ಹಝ್ರತ್ ಪೈಗಂಬರ್(ಸ) ಮದೀನದ ಕಡೆಗೆ ವಲಸೆ ಹೋದಾಗ ಅವರು ಕೂಡ ಹಿಜ್ರತ್ ಮಾಡಿದರು. ಆದ್ದರಿಂದ ಹಝ್ರತ್ ಝಿಯಾದನ್ನು ಮುಹಾಜಿರ್ ಅನ್ಸಾರ್ ಎಂದು ಕರೆಯಲಾಗುತ್ತಿತ್ತು. ಎಂದರೆ ಅವರು ಮುಹಾಜಿರ್ ಕೂಡ ಆಗಿದ್ದರು, ಅನ್ಸಾರ್ ಕೂಡ. ಹಝ್ರತ್ ಝಿಯಾದ್(ರ) ಬದ್ರ್, ಉಹದ್, ಖಂದಕ್ ಮತ್ತು ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಇದ್ದರು. ಹಝ್ರತ್ ಪೈಗಂಬರ್(ಸ) ಹಿಜ್ರತ್ ಮಾಡಿ ಮದೀನಕ್ಕೆ ತಲುಪಿದಾಗ ಮತ್ತು ಬನೂ ಬಿಯಾಝು ಗೋತ್ರದ ಬಡಾವಣೆಯಿಂದ ಸಾಗಿದಾಗ ಹಝ್ರತ್ ಝಿಯಾದ್ ಹಝ್ರತ್ ಪೈಗಂಬರ್(ಸ)ರನ್ನು ಸ್ವಾಗತಿಸಿದರು ಮತ್ತು ತಂಗಲಿಕ್ಕಾಗಿ ತನ್ನ ಮನೆಯನ್ನು ಅರ್ಪಿಸಲು ತಯಾರಾದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಒಂಟೆಯನ್ನು ಸ್ವತಂತ್ರವಾಗಿ ಬಿಡಿರಿ. ಇದು ಸ್ವತಃ ತನ್ನ ತಂಗುದಾಣವನ್ನು ಹುಡುಕುವುದು. ಹಿಜ್ರಿ ತಿಂಗಳ ಮುಹರ್ರಂ ಮಾಸದ ಒಂಬತ್ತನೇ ತಾರೀಕಿನಂದು ಹಝ್ರತ್ ಪೈಗಂಬರ್(ಸ) ಸದಖ ಮತ್ತು ಝಕಾತಿನ ವಸೂಲಿಗಾಗಿ ಬೇರೆ ಬೇರೆ ವಸೂಲುಗಾರರನ್ನು ನಿಶ್ಚಯಿಸಿದರು. ಆಗ ಹಝ್ರತ್ ಝಿಯಾದ್‌ನನ್ನು ಹಝ್ರೆ ಮೌತಿನ ವಸೂಲುಗಾರರನ್ನಾಗಿ ಮಾಡಿದರು. ಹಝ್ರತ್ ಉಮರ್(ರ)ರ ಕಾಲದಲ್ಲಿ ಅವರು ಅದೇ ಸೇವೆಯಲ್ಲಿ ಇದ್ದರು. ಈ ಹುದ್ದೆಯಿಂದ ಸ್ವತಂತ್ರರಾದ ನಂತರ ಅವರು ಕೂಫದಲ್ಲಿ ನೆಲೆಸಿದರು ಮತ್ತು ಅಲ್ಲೇ ಹಿಜರೀ 41ರಲ್ಲಿ ನಿಧನರಾದರು. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–302, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996) (ಪಚಾಸ್ ಸಹಾಬ(ರ), ತಾಲಿಬ್ ಹಾಶ್ಮಿ, ಪುಟ–557–559, ಅಲ್‌ಬದರ್ ಪಬ್ಲಿಕೇಷನ್ಸ್ ಲಾಹೋರ್)

ಹಝ್ರತ್ ಮುಹಾಜಿರ್(ರ) ನಜ್ರಾನಿನ ಕಡೆಗೆ ಹೊರಟ ಬಗ್ಗೆ ಹೀಗೆ ಬರೆಯಲಾಗಿದೆ. ಹಝ್ರತ್ ಅಬೂಬಕರ್(ರ) ರೂಪುಗೊಳಿಸಿದ

ಹನ್ನೊಂದು ಸೈನ್ಯಗಳಲ್ಲಿ ಕೊನೆಯದಾಗಿ ಹಝ್ರತ್ ಮುಹಾಜಿರ್ ಬಿನ್ ಉಮಯ್ಯರ(ರ)ರ ಸೈನ್ಯ ಮದೀನದಿಂದ ಯಮನಿನ ಕಡೆಗೆ ಹೊರಟಿತು. ಮಾರ್ಗದಲ್ಲಿ ಅನೇಕ ಗೋತ್ರಗಳ ಜನರು ಅವರ ಸೈನ್ಯದಲ್ಲಿ ಸೇರಿಕೊಂಡರು. ಈ ಬಹಳ ದೊಡ್ಡದಾದ ಸೈನ್ಯ ಮುಂದಕ್ಕೆ ಹೋಗುತ್ತಲೇ ಹೋಯಿತು. (ಸಯ್ಯದುನಾ ಹಝ್ರತ್ ಅಬೂಬಕರ್ ಸಿದ್ದೀಖ್(ರ), ಡಾ. ಅಲಿ ಮುಹಮ್ಮದ್ ಸಲಾಬಿ, ಪುಟ–305)

ಅಮ್ರ್ ಬಿನ್ ಮಅ್ದಿ ಕರಬ್ ಮತ್ತು ಖೈಸ್ ಬಿನ್ ಮಕ್‌ಶೂಹ್‌ನ ಬಂಧನದ ಬಗ್ಗೆ ಹೀಗೆ ಬರೆಯಲಾಗಿದೆ: ಅಮ್ರ್ ಬಿನ್ ಮಹ್‌ದಿ ಕರ್‌ಬ್ ತನ್ನ ಶೌರ್ಯ ಮತ್ತು ಶಕ್ತಿಯ ಅಹಂಭಾವದಿಂದ ಇಸ್ಲಾಮಿನ ಆಡಳಿತದ ವಿರುದ್ಧ ದಂಗೆಯೆದ್ದನು ಮತ್ತು ಖೈಸ್ ಬಿನ್ ಅಬ್ದ್ ಯಗೂಸ್‌ನನ್ನು ಜೊತೆಗೆ ಸೇರಿಸಿದನು. ಈ ಇಬ್ಬರೂ ಪ್ರತಿಯೊಂದು ಗೋತ್ರಕ್ಕೆ ಹೋಗಿ ಅವರನ್ನು ಮುಸ್ಲಿಮರ ವಿರುದ್ಧ ದಂಗೆ ಏಳಲು ಹುರಿದುಂಬಿಸುತ್ತಿದ್ದರು. ಇದರ ಪರಿಣಾಮವಾಗಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಸ್ನೇಹದ ಪ್ರತಿಜ್ಞೆಯನ್ನು ಮಾಡಿದ್ದ ಮತ್ತು ಹಝ್ರತ್ ಅಬೂಬಕರ್(ರ)ರ ಕಾಲದಲ್ಲೂ ತನ್ನ ಒಪ್ಪಂದದಲ್ಲಿ ನೆಲೆನಿಂತಿದ್ದ ನಜ್ರಾನಿನ ಕ್ರೈಸ್ತ ನಿವಾಸಿಗಳು ಹೊರತುಪಡಿಸಿ ಉಳಿದ ಎಲ್ಲ ಗೋತ್ರದವರು ಅಮ್ರ್ ಬಿನ್ ಮಹ್‌ದಿ ಕರ್‌ಬಿನ ಜೊತೆಗೆ ಸೇರಿಕೊಂಡರು ಮತ್ತು ಮುಸ್ಲಿಮರ ವಿರುದ್ಧ ಎದ್ದುನಿಂತರು. ದೊಡ್ಡದಾದ ಒಂದು ಸೈನ್ಯದೊಂದಿಗೆ ಹಝ್ರತ್ ಮುಹಾಜಿರ್(ರ) ಯಮನಿನ ಕಡೆಗೆ ಬರುತ್ತಿರುವುದಾಗಿ ಯಮನಿನ ನಿವಾಸಿಗಳಿಗೆ ಸುದ್ದಿ ತಲುಪಿದಾಗ, ಹಝ್ರತ್ ಮುಹಾಜಿರರ ಸೈನ್ಯವನ್ನು ಎದುರಿಸಲು ಸಾಧ್ಯವಲ್ಲವೆಂದು ಯಮನ್ ನಿವಾಸಿಗಳು ಚಿಂತಿತರಾದರು. ಆ ಜನರು ಇದೇ ಸ್ಥಿತಿಯಲ್ಲಿದ್ದಾಗ ಅವರ ಸರದಾರ ಖೈಸ್ ಮತ್ತು ಅಮ್ರ್ ಬಿನ್ ಮಹ್‌ದಿ ಕರ್ಬ್‌ರ ನಡುವೆ ಒಡಕು ಉಂಟಾಯಿತು. ಹಝ್ರತ್ ಮುಹಾಜಿರ್‌ರನ್ನು ಎದುರಿಸಲು ಅವರಿಬ್ಬರೂ ಪ್ರತಿಜ್ಞೆ ಮಾಡಿದ್ದರು ಕೂಡ ಅವರಿಬ್ಬರೂ ಪರಸ್ಪರ ಹಾನಿ ಉಂಟುಮಾಡುವ ಪ್ರಯತ್ನದಲ್ಲಿ ನಿರತರಾದರು. ಕೊನೆಗೆ ಅಮ್ರ್ ಬಿನ್ ಮಹ್‌ದಿ ಕರ್ಬ್ ಮುಸ್ಲಿಮರ ಜೊತೆಗೆ ಸೇರಲು ತೀರ್ಮಾನ ಮಾಡಿದನು. ಒಂದು ರಾತ್ರಿ ಅವನು ತನ್ನ ಜನರ ಜೊತೆಗೆ ಖೈಸ್‌ನ ತಂಗುದಾಣದ ಮೇಲೆ ದಾಳಿ ನಡೆಸಿದನು. ಅವನನ್ನು ಬಂಧಿಸಿ ಹಝ್ರತ್ ಮುಹಾಜಿರರ ಮುಂದೆ ತಂದನು. ಆದರೆ ಮುಹಾಜಿರ್(ರ) ಖೈಸ್‌ನನ್ನು ಮಾತ್ರವಲ್ಲ ಅಮ್ರ್ ಬಿನ್ ಮಹ್‌ದಿ ಕರ್ಬ್‌ನನ್ನು ಕೂಡ ಬಂಧಿಸಿದರು. ಅವರಿಬ್ಬರ ಬಗ್ಗೆ ಹಝ್ರತ್ ಅಬೂಬಕರ್(ರ)ರಿಗೆ ಪತ್ರ ಬರೆದರು ಮತ್ತು ಅವರಿಬ್ಬರನ್ನೂ ಹಝ್ರತ್ ಅಬೂಬಕರ್(ರ)ರ ಬಳಿಗೆ ಕಳುಹಿಸಿದರು.

ಖೈಸ್ ಮತ್ತು ಅಮ್ರ್ ಬಿನ್ ಮಹ್‌ದಿ ಕರ್‌ಬ್‌ನನ್ನು ಹಝ್ರತ್ ಅಬೂಕಬಕರ್(ರ)ರ ಸಮೀಪಕ್ಕೆ ತರಲಾಯಿತು. ಹಝ್ರತ್ ಅಬೂಕಬಕರ್(ರ) ಖೈಸ್‌ನೊಡನೆ ಹೇಳಿದರು: ನೀನು ಅಲ್ಲಾಹನ ದಾಸರ ಮೇಲೆ ದೌರ್ಜನ್ಯ ಮತ್ತು ಹಿಂಸೆ ಮಾಡಿಕೊಂಡು ಅವರನ್ನು ಕೊಲ್ಲುತ್ತಿದ್ದೆ. ನೀನು ಸತ್ಯವಿಶ್ವಾಸಿಗಳನ್ನು ಬಿಟ್ಟು ಮುಶ್ರಿಕರನ್ನು ಮತ್ತು ಧರ್ಮತ್ಯಾಗಿಗಳಾದ ದಂಗೆಗಾರರನ್ನು ತನ್ನ ಸ್ನೇಹಿತರನ್ನಾಗಿ ಮಾಡಿದ್ದೀಯ. ಅವನು ಅಪರಾಧ ಮಾಡಿದ್ದಾಗಿ ಸ್ಪಷ್ಟವಾದ ಪುರಾವೆ ಸಿಕ್ಕಿದರೆ ಹಝ್ರತ್ ಅಬೂಕಬಕರ್(ರ) ಅವನನ್ನು ವಧಿಸಲು ನಿರ್ಧರಿಸಿದ್ದರು. ಈ ಕುರಿತು ಖೈಸ್‌ನ ವಿರುದ್ಧ ಸ್ಪಷ್ಟವಾದ ಸಬೂಬು ಲಭಿಸಲಿಲ್ಲ. ಪುರಾವೆ ಏನೂ ಇಲ್ಲದ ಕಾರಣದಿಂದ ಹಝ್ರತ್ ಅಬೂಕಬಕರ್(ರ) ಅವನನ್ನು ವಧಿಸುವುದರಿಂದ ಹಿಂದೆ ಸರಿದರು. ಎರಡನೆಯದಾಗಿ ಹಝ್ರತ್ ಅಬೂಕಬಕರ್(ರ) ಅಮ್ರ್ ಬಿನ್ ಮಹ್‌ದಿ ಕರ್‌ಬ್‌ನೊಡನೆ ಹೇಳಿದರು: ಪ್ರತಿದಿನ ಸೋಲು ಅನುಭವಿಸಿಯೂ ಮತ್ತು ನಿನ್ನ ಶಕ್ತಿ ಕಮ್ಮಿ ಹೋಗುತ್ತಾ ಇರುವುದನ್ನೂ ಕಂಡೂ ನಿನಗೆ ಅವಮಾನ ಆಗುತ್ತಿಲ್ಲವೇ? ನೀನು ಈ ಧರ್ಮದ ಸಹಾಯವನ್ನು ಮಾಡಿದರೆ ಅಲ್ಲಾಹನು ನಿನಗೆ ಉನ್ನತ ಪದವಿಗಳನ್ನು ದಯಪಾಲಿಸುವನು. ಅನಂತರ ಹಝ್ರತ್ ಅಬೂಕಬಕರ್(ರ) ಅವರಿಬ್ಬರನ್ನೂ ಸ್ವತಂತ್ರಗೊಳಿಸಿದರು. ಅವರ ಗೋತ್ರಗಳಿಗೆ ಒಪ್ಪಿಸಿದರು. ಅಮ್ರ್ ಹೇಳಿದನು: ಈಗ ನಾವು ಅಮೀರುಲ್ ಮೂಅ್‌ಮಿನ್‌ರ ಉಪದೇಶವನ್ನು ಸ್ವೀಕಾರ ಮಾಡುತ್ತೇವೆ. ಖಂಡಿತವಾಗಿಯೂ ಪುನಃ ಈ ತಪ್ಪನ್ನು ಮಾಡುವುದಿಲ್ಲ.
(ತಾರೀಖ್ ಅತ್ತಬರಿ, ಸಂಪುಟ–2, ಪುಟ–299, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಅವರಿಬ್ಬರ ವಿರುದ್ಧ ಸ್ಪಷ್ಟವಾದ ಪುರಾವೆಗಳು ಇಲ್ಲದ ಕಾರಣದಿಂದ ಮತ್ತು ಅವರು ಗೌರವಾನ್ವಿತರೂ ಅರಿವುಳ್ಳವರೂ ಆಗಿದ್ದ ಕಾರಣದಿಂದ ಅವರಿಬ್ಬರನ್ನೂ ಕ್ಷಮಿಸಲಾಯಿತು. ಅವರಿಬ್ಬರು ಕ್ಷಮಾಪಣೆ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಅಬೂಬಕರ್(ರ)ರ ಕುರಿತು ಒಬ್ಬ ಚರಿತ್ರೆಗಾರ ಹೀಗೆ ಬರೆಯುತ್ತಾರೆ: ಹಝ್ರತ್ ಅಬೂಕಬಕರ್(ರ) ಬಹಳ ದೂರದೃಷ್ಟಿ ಹೊಂದಿದ್ದ ವ್ಯಕ್ತಿಯಾಗಿದ್ದರು. ಸಂಗತಿಗಳ ಕೊನೆಯ ಪರಿಣಾಮದ ಬಗ್ಗೆ ಗಮನವಹಿಸುತ್ತಿದ್ದರು.

ಕಠಿಣವಾಗಿ ವರ್ತಿಸಬೇಕಾದ ಸಂದರ್ಭಗಳಲ್ಲಿ ಕಠಿಣತೆ ತೋರಿಸುತ್ತಿದ್ದರು. ಕ್ಷಮಾಪಣೆಯ ಆವಶ್ಯಕತೆ ಇರುವ ಸ್ಥಳದಲ್ಲಿ ಕ್ಷಮಿಸುತ್ತಿದ್ದರು. ಬೇರೆ ಬೇರೆಯಾಗಿರುವ ಗೋತ್ರಗಳ ಜನರನ್ನು ಇಸ್ಲಾಮಿನ ಬಾವುಟದ ಕೆಳಗೆ ಒಟ್ಟು ಸೇರಿಸಲು ಅವರು ಅತಿಯಾದ ಆಸಕ್ತಿಯನ್ನು ಹೊಂದಿದ್ದರು. ವಿರೋಧಿಗಳಾದ ಗೋತ್ರ ನೇತಾರರು ಸತ್ಯದ ಕಡೆಗೆ ಬಂದರೆ ಅವರನ್ನು ಕ್ಷಮಿಸುವುದು ಅವರ ವಿವೇಕಯುತ ರಾಜಕೀಯವಾಗಿತ್ತು. ಯಮನಿನ ಧರ್ಮತ್ಯಾಗಿ ಗೋತ್ರಗಳನ್ನು ಹಝ್ರತ್ ಅಬೂಕಬಕರ್(ರ) ಅಧೀನಗೊಳಿಸಿದಾಗ ಇಸ್ಲಾಮಿನ ಮೇಲುಗೈ, ವಿಜಯ, ಮುಸ್ಲಿಮರ ಗೌರವ ಮತ್ತು ವಿಜಯದ ಶಕ್ತಿಯನ್ನು ನೋಡಿದಾಗ ಗೋತ್ರಗಳು ಇಸ್ಲಾಮಿನ ಆಡಳಿತದ ಅಧೀನದಲ್ಲಿರಲು ಒಪ್ಪಿಕೊಂಡರು ಮತ್ತು ಖಲೀಫತುರ್ರಸೂಲ್‌ರ ಅನುಸರಣೆಯನ್ನು ಸ್ವೀಕಾರ ಮಾಡಿಕೊಂಡರು. ಗೋತ್ರಗಳ ಸರದಾರರೊಂದಿಗೆ ಪ್ರೀತಿಯಿಂದ ವರ್ತಿಸಲು ಮತ್ತು ಕಠಿಣವಾಗಿ ವರ್ತಿಸುವುದಕ್ಕೆ ಬದಲಾಗಿ ಸೌಮ್ಯದಿಂದ ಹಾಗೂ ಮೃದುವಾಗಿ ವರ್ತಿಸುವುದು ಸರಿಯೆಂದು ಹಝ್ರತ್ ಅಬೂಕಬಕರ್(ರ) ಅರಿತಿದ್ದರು. ಆದ್ದರಿಂದ ಅವರನ್ನು ಶಿಕ್ಷಿಸಲಿಲ್ಲ, ಅವರೊಂದಿಗೆ ಸೌಮ್ಯವಾಗಿ ಮಾತನಾಡಿದರು ಮತ್ತು ಗೋತ್ರದೊಳಗೆ ಈ ಸರದಾರರಿಗೆ ಇದ್ದ ಅಧಿಕಾರ ಮತ್ತು ಪ್ರಭಾವವನ್ನು ಇಸ್ಲಾಂ ಮತ್ತು ಮುಸ್ಲಿಮರ ಏಳಿಗೆಗಾಗಿ ಉಪಯೋಗಿಸಿದರು. ಹಝ್ರತ್ ಅಬೂಕಬಕರ್(ರ) ಅವರ ಸಣ್ಣ ತಪ್ಪುಗಳನ್ನು ಕ್ಷಮಿಸಿದರು ಅವರೊಂದಿಗೆ ಉತ್ತಮವಾಗಿ ವರ್ತಿಸಿದರು. ಖೈಸ್ ಬಿನ್ ಅಬ್ದೇ ಯಗೂಸ್ ಮತ್ತು ಅಮ್ರ್ ಬಿನ್ ಮಹ್‌ದಿ ಕರ್ಬ್‌ನೊಂದಿಗೂ ಹೀಗೆಯೇ ವರ್ತಿಸಿದರು. ಈ ಇಬ್ಬರೂ ಅರೇಬಿಯದ ಶೂರರು ಬುದ್ಧಿವಂತರೂ ಆಗಿದ್ದರು. ಅವರನ್ನು ವ್ಯರ್ಥಗೊಳಿಸುವುದು ಹಝ್ರತ್ ಅಬೂಕಬಕರ್(ರ)ರಿಗೆ ಸರಿ ಅನಿಸಲಿಲ್ಲ. ಅವರನ್ನು ಇಸ್ಲಾಮಿಗಾಗಿ ಮಾತ್ರವಿರುವವರನ್ನಾಗಿ ಮಾಡಲು ಬಯಸಿದರು. ಇಸ್ಲಾಂ ಮತ್ತು ಧರ್ಮತ್ಯಾಗದ ನಡುವೆ ಇದ್ದುಕೊಂಡು ಒದ್ದಾಡುವುದರಿಂದ ಬಚಾವು ಮಾಡಲು ಅವರು ಬಯಸಿದರು. ಅಮ್ರ್ ಬಿನ್ ಮಹ್‌ದಿ ಕರ್‌ಬ್‌ರನ್ನು ಹಝ್ರತ್ ಅಬೂಕಬಕರ್(ರ) ಸ್ವತಂತ್ರಗೊಳಿಸಿದರು. ಆ ದಿನದ ನಂತರ ಅಮ್ರ್ ಎಂದಿಗೂ ಧರ್ಮತ್ಯಾಗ ಮಾಡಲಿಲ್ಲ. ಬದಲಾಗಿ ಇಸ್ಲಾಂ ಸ್ವೀಕಾರ ಮಾಡಿಕೊಂಡು ಉತ್ತಮ ಮುಸ್ಲಿಮನಾಗಿ ಜೀವನ ಸಾಗಿಸಿದರು. ಅಲ್ಲಾಹನು ಅವರ ಸಹಾಯ ಮಾಡಿದನು. ಅವರು ಇಸ್ಲಾಮಿನ ವಿಜಯಗಳಲ್ಲಿ ಮುಖ್ಯವಾದ ಪಾತ್ರವನ್ನು ವಹಿಸಿಕೊಂಡರು. ಖೈಸ್ ಕೂಡ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಮಾಡಿದರು. ಅರೇಬಿಯದ ಈ ಇಬ್ಬರು ಸರದಾರರನ್ನು ಕ್ಷಮಿಸಿದ ಕಾರಣದಿಂದ ಹಿರಿದಾದ ಮತ್ತು ದೀರ್ಘಕಾಲೀನ ಪ್ರಭಾವಗಳು ಉಂಟಾದುವು. ಧರ್ಮತ್ಯಾಗದ ನಂತರ ಭಯ ಮತ್ತು ಲಾಲಸೆಯಿಂದ ಇಸ್ಲಾಮಿನ ಕಡೆಗೆ ಮರಳಿದ ಜನರ ಹೃದಯಗಳನ್ನು ಹಝ್ರತ್ ಅಬೂಕಬಕರ್(ರ) ಜೋಡಿಸಿದರು. ಅಶ್‌ಅಸ್ ಬಿನ್ ಖೈಸ್‌ನನ್ನು ಕ್ಷಮಿಸಿದರು. ಈ ರೀತಿಯಾಗಿ ಹಝ್ರತ್ ಅಬೂಕಬಕರ್(ರ) ಅವರ ಹೃದಯಗಳನ್ನು ಸ್ವಾಧೀನಪಡಿಸಿದರು. ಅವರ ಹೃದಯಗಳ ಯಜಮಾನರಾದರು. ನಂತರ ಕಾಲದಲ್ಲಿ ಈ ಜನರು ಇಸ್ಲಾಮಿನ ಸಹಾಯ ಮತ್ತು ಮುಸ್ಲಿಮರ ಶಕ್ತಿಗೆ ಕಾರಣಕರ್ತರಾದರು. (ಸಯ್ಯದುನಾ ಅಬೂಬಕ್ಕರ್ ಸಿದ್ದೀಖ್, ಡಾ॥ ಅಲಿ ಮುಹಮ್ಮದ್ ಸಲಾಬಿ, ಉರ್ದು ಅನುವಾದ ಪುಟ–313–314)

ಎಂದರೆ ಯಾವುದೇ ರೀತಿಯ ಒತ್ತಾಯ ಇರಲಿಲ್ಲ. ಬದಲಾಗಿ ಮನಸ್ಸಾರೆ ಅವರು ಇಸ್ಲಾಂ ಸ್ವೀಕಾರ ಮಾಡಿಕೊಂಡರು ಮತ್ತು ಹಝ್ರತ್ ಅಬೂಕಬಕರ್(ರ)ರನ್ನು ಅನುಸರಣೆ ಮಾಡಿದರು.

ಹಝ್ರತ್ ಮುಹಾಜಿರ್(ರ) ನಜ್ರಾನಿನಿಂದ ಲಹ್‌ಜಿಯದ ಕಡೆಗೆ ಹೊರಟರು. ಕುದುರೆಸವಾರರು ಜನರ ಗುಂಪುಗಳನ್ನು ಸುತ್ತುವರೆದಾಗ ಅವರು ಅಭಯಕ್ಕಾಗಿ ವಿನಂತಿ ಮಾಡಿಕೊಂಡರು. ಆದರೆ ಹಝ್ರತ್ ಮುಹಾಜಿರ್(ರ) ಅಭಯ ಕೊಡುವುದನ್ನು ನಿರಾಕರಿಸಿದರು. ಆಗ ಜನರು ಎರಡು ಗುಂಪುಗಳಾಗಿ ವಿಂಗಡನೆಗೊಂಡರು. ಅವರಲ್ಲಿ ಒಂದು ಗುಂಪಿನೊಂದಿಗೆ ಅಜೀಬ್ ಎಂಬ ಪ್ರದೇಶದಲ್ಲಿ ಹಝ್ರತ್ ಮುಹಾಜಿರರ ಮುಖಾಮುಖಿಯಾಯಿತು. ಅಜೀಬ್ ಎಂಬುದು ಯಮನಿನ ಒಂದು ಪ್ರದೇಶವಾಗಿದೆ. ಹಝ್ರತ್ ಮುಹಾಜಿರರ ಇತರ ಕುದುರೆಸವಾರರು ಹಝ್ರತ್ ಅಬ್ದುಲ್ಲಾಹ್‌ರ ನೇತೃತ್ವದಲ್ಲಿ ಅಖ್ಬಾಬಸಿನ ಮಾರ್ಗದಲ್ಲಿ ಆ ಜನರನ್ನು ಎದುರಿಸಿದರು. ಪರಾರಿಯಾಗುತ್ತಿದ್ದ ಶತ್ರುಗಳನ್ನು ಪ್ರತಿಯೊಂದು ರಸ್ತೆಯಿಂದಲೂ ವಧಿಸಲಾಯಿತು. (ತಾರೀಖ್ ತಬರಿ, ಸಂಪುಟ–2, ಪುಟ–29, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಮುಜಮುಲ್ ಬಲದಾನ್, ಸಂಪುಟ–4, ಪುಟ–99)

ಹಝ್ರತ್ ಮುಹಾಜಿರ್(ರ) ಸುನ್‌ಅಗೆ ತಲುಪಿದ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಮುಹಾಜಿರ್ ಅಜೀಬ್‌ನಿಂದ ಹೊರಟು ಸುನ್‌ಅಗೆ ತಲುಪಿದರು. ಪರಾರಿಯಾಗುತ್ತಿದ್ದ ವಿವಿಧ ಗೋತ್ರದವರನ್ನು

ಹಿಂಬಾಲಿಸಲು ಅವರು ಆಜ್ಞಾಪಿಸಿದರು. ಹಿಡಿಯಲ್ಪಟ್ಟವರನ್ನು ಮುಸ್ಲಿಮರು ವಧಿಸಿದರು. ಯಾವನೇ ದ್ರೋಹಿಯನ್ನು ಕ್ಷಮಿಸಲಿಲ್ಲ. ಆದರೆ ದ್ರೋಹಿಗಳಲ್ಲದವರಲ್ಲಿ ತೌಬ ಮಾಡಿಕೊಂಡವರ ಪಶ್ಚಾತ್ತಾಪವನ್ನು ಸ್ವೀಕಾರ ಮಾಡಲಾಯಿತು. ಯುದ್ಧ ಮತ್ತು ಹಿಂಸೆ ಮಾಡಿದವರನ್ನು ಕ್ಷಮಿಸಲಿಲ್ಲ. ಆದರೆ ಇತರರನ್ನು ಕ್ಷಮಿಸಲಾಯಿತು. ಅವರ ಹಿಂದಿನ ಸ್ಥಾನಮಾನದ ಪ್ರಕಾರವೇ ಅವರೊಡನೆ ವರ್ತಿಸಲಾಯಿತು. ಅವರು ಸುಧಾರಣೆಗೊಳ್ಳುವುದು ಎಂಬ ಪ್ರತೀಕ್ಷೆಯಿತ್ತು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–299, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಮುಂದಿನ ಪ್ರಸ್ತಾಪ ಸ್ವಲ್ಪ ದೀರ್ಘವಾದುದಾಗಿದೆ. ಆದ್ದರಿಂದ ಇದನ್ನು ಇಲ್ಲೇ ನಿಲ್ಲಿಸುತ್ತೇನೆ.

***********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮತ್ತು ಕೆಲವನ್ನು ಕೆಲ ಬದಲಾವಣೆಗಳೊಂದಿಗೆ ಬರೆಯಲಾಗಿದೆ ಮತ್ತು ಕೆಲವು ಅರಬಿಯ ಪ್ರಸಿದ್ಧ ಉದಾಹರಣೆಗಳನ್ನು ಕದಿಯಲಾಗಿದೆ. ಅದನ್ನು ಪೀರ್ ಸಾಹಿಬ್ ಕಂಡುಕೊಂಡಿದ್ದಾರೆ. (ಅದೇ ಪುಟ 432).

**ಇದು ತವಾರುದ್ ಆಗಿದೆ (ಅಂದರೆಇಬ್ಬರು ಲೇಖಕರು ಒಂದೇ ವಿಷಯವನ್ನು ಕುರಿತು ಒಂದೇ ಬಗೆಯ ವಿಚಾರ ಹೊಂದಿರುವುದು) ಇದು ಸಾಮಾನ್ಯ ಎಲ್ಲಾ ಸಾಹಿತಿಗಾರರ ಸಾಹಿತ್ಯದಲ್ಲಿ ಕಂಡುಬರುತ್ತದೆ, ಅರ್ಥವನ್ನು ಸೂಚಿಸುವ ಉಲ್ಲೇಖವಿಲ್ಲ. ಅದು ಎಲ್ಲಾ ಸಾಹಿತ್ಯಕಾರರಲ್ಲಿ ಇರುತ್ತದೆ. ಹರೀರಿಯು ಒಟ್ಟುಗೂಡಿಸಿದ ಎಲುಬುಗಳಿಂದ ತಿರುಳು ಪಡೆಯಲು ಸಾಧ್ಯವಿಲ್ಲ.**

ಈ ನ್ಯೂನತೆಗಳು ಮತ್ತು ಎರಡು ಅಥವಾ ನಾಲ್ಕು ವಾಕ್ಯಗಳನ್ನು ಸಾಹಿತ್ಯಕಾರರ ಸಾಹಿತ್ಯ ಎಂದು ಭಾವಿಸಿದರೆ ಅದರಲ್ಲಿ ಆಕ್ಷೇಪಣೆ ಪಡುವಂತಹದ್ದೇನಿದೆ. ಸ್ವಯಂ ಹರೀರಿಯ ಪುಸ್ತಕದಲ್ಲಿ ಕೆಲ ಖುರ್‌ಆನ್‌ನ ವಚನಗಳು, ಅಧ್ಯಾಪನೆಗಳಿವೆ. ಹಾಗೆಯೇ ಕೆಲ ನುಡಿಗಟ್ಟುಗಳು ಮತ್ತು ಕವಿತೆ ಸಾಲುಗಳು ಬದಲಾವಣೆಗಳಲ್ಲದೇ ಅದರಲ್ಲಿ ಕಾಣಬಹುದಾಗಿದೆ. ಅಬ್ದುಲ್ ಫಝುಲ್ ಅವರ ಕೆಲ ಅಧ್ಯಾಪನೆಗಳು ಅದೇ ರೀತಿಯಲ್ಲಿ ಕಾಣಸಿಗುತ್ತವೆ. ಅದರಿಂದ ಅವು ಕದಿಯಲ್ಪಟ್ಟು ಬರೆದದ್ದಾಗಿದೆ ಎಂದು ಹೇಳಲು ಸಾಧ್ಯವೇ. ಹೇಳಲಾಗುತ್ತದೆ. ಒಂದು ಸಂದರ್ಭದಲ್ಲಿ ವಾಕ್ಚಾತುರ್ಯದಲ್ಲಿ ಪರಿಣಿತರಾದವರು ಎಂದು ತಿಳಿದು ಓರ್ವ ಶ್ರೀಮಂತನ ಮುಂದೆ ಪ್ರಸ್ತುತಪಡಿಸಲಾಯಿತು ಮತ್ತು ಪರೀಕ್ಷೆ ರೂಪದಲ್ಲಿ ಹೇಳಲಾಯಿತು. ವಾಕ್ಚಾತುರ್ಯಪೂರ್ಣ ರೀತಿಯಲ್ಲಿ ಬರೆಯಿರಿ ಎಂದು. ಆದರೆ ಬರೆಯಲು ಸಾಧ್ಯವಾಗಲಿಲ್ಲ. ಅದು ಅವನಿಗೆ ಅಪಮಾನವಾಗಿ ಪರಿಣಮಿಸಿತು. ಅದು ಪ್ರಾರಂಭದಿಂದ ಕೊನೆಯ ತನಕ ಕ್ಷಮೆಯ ಪದಗಳನ್ನು ಬಳಸಿದನು. ಅದರಿಂದ ಸಾಬೀತಾಯಿತು ಅವನು ಖಂಡಿತವಾಗಿಯೂ ಪಾಂಡಿತ್ಯಪೂರ್ಣ ಅರಬಿಯಲ್ಲಿ ಬರೆಯಲು ಅರ್ಹನಾಗಿರಲಿಲ್ಲ. ಆದುದರಿಂದ ಯಾವ ವ್ಯಕ್ತಿಗೆ ಕ್ಷಮೆ ಮುಖ್ಯವಾಗಿದೆ. ತತ್ವಜ್ಞಾನ, ಸಾಕ್ಷ್ಯಗಳಿಂದ ಅವನಿಗೆ ಏನು ಬೇಕಾಗಲಿಲ್ಲ ಎಂದರೆ ಅದು ಹರೀರಿಯ ಒಟ್ಟುಗೂಡಿಸಿದ ಎಲುಬುಗಳಿಂದ ತಿರುಳು ಪಡೆಯಲು ಸಾಧ್ಯವಿಲ್ಲ. (ಅದೇ ಪುಟ 433).

**ಮನುಷ್ಯನಂತೂ ಮನುಷ್ಯನಾಯಿತು. ಅಲ್ಲಾಹನ ಗ್ರಂಥದಲ್ಲೂ ಅದೇ ಕಾಣಬಹುದು.**

ಹಾಗೆಯೇ ಸಾಹಿತ್ಯಕಾರರಿಗೂ ಅಂತಹ ಸಂದರ್ಭ ಒದಗಿಬರುತ್ತದೆ. ಅಂದರೆ ಇಪ್ಪತ್ತು ವ್ಯಕ್ತಿಗಳಿಗೆ ಅವರು ಒಂದೇ ವಿಷಯ ಬರೆಯುವವರಾದರೆ, ಆ ಇಪ್ಪತ್ತು ಸಾಹಿತ್ಯಕಾರರೂ ಸಹ ಪರಿಣತರಾಗಿದ್ದರೆ ಆ ಸಂದರ್ಭದಲ್ಲಿ ವಿವರಣೆಯಲ್ಲಿ ಒಂದೇ ತರಹದ ಪದಗಳು ಅಥವಾ ವಾಕ್ಯಗಳು ಬಂದುಬಿಟ್ಟರೆ ಆ ಮಾತು ಸಾಹಿತ್ಯಕಾರರ ದೃಷ್ಟಿಯಲ್ಲಿ ಆಗುವಂತಹದ್ದೆ ಆಗಿದೆ. ಅದನ್ನು ಯಾರೂ ಅಲ್ಲಗಳೆಯುವುದಿಲ್ಲ. ಗಮನ ವಹಿಸಿ ನೋಡಿದರೆ ಎಲ್ಲ ಭಾಷೆಯಲ್ಲೂ ಅದೇ ಸ್ಥಿತಿ ಇರುತ್ತದೆ. ಉರ್ದುವಿನಲ್ಲಿ ಸಹ ಉದಾಹರಣೆಗೆ ಓರ್ವ ವ್ಯಕ್ತಿ ಒಂದು ಭಾಷಣ ಮಾಡಿದರೆ ಅದರಲ್ಲಿ ಎಲ್ಲಿಂದಲೋ ಉದಾಹರಣೆಗಳು ಪ್ರಸ್ತುತಪಡಿಸಿದರೆ ಎಲ್ಲಿಂದಲೋ ರೋಚಕ ನುಡಿಗಟ್ಟುಗಳು ವಿವರಿಸಿದರೆ, ಇನ್ನೊರ್ವನು ಸಹ ಅದೇ ರೀತಿ ಭಾಷಣ ಮಾಡಿದರೆ ಒಬ್ಬ ಹುಚ್ಚನ ಹೊರತು ಯಾರೂ ಸಹ ಭಾವಿಸುವುದಿಲ್ಲ. ಅದು ಕದ್ದು ಭಾಷಣ ಮಾಡಲಾಗಿದೆ ಎಂದು. ಮನುಷ್ಯನಂತೂ ಮನುಷ್ಯನಾಗಿದ್ದಾನೆ. ಅಲ್ಲಾಹನ ಗ್ರಂಥದಲ್ಲೂ ಆ ರೀತಿ ಕಾಣಬಹುದಾಗಿದೆ. ಕೆಲ ನುಡಿಗಟ್ಟುಗಳು ಅಥವಾ ಉದಾಹರಣೆಗಳು ಪವಿತ್ರ ಖುರ್‌ಆನ್‌ನಲ್ಲಿ ಇರುವಂತಹದ್ದು. ಅಜ್ಞಾನಿ ಕವಿಗಳ ಖಸೀದದಲ್ಲಿ ಕಂಡುಕೊಂಡರೆ (ಅದರ ಒಂದು ದೊಡ್ಡ ಪಟ್ಟಿಯೇ ತಯಾರಿಸಬಹುದಾಗಿದೆ) ಅದನ್ನು ಯಾವ ವಿದ್ವಾಂಸರಾಗಲಿ ಆಕ್ಷೇಪ ಎತ್ತುವುದಿಲ್ಲ.

**ನನ್ನ ಮೇಲೆ ಯಾವುದೇ ಉತ್ತಮ ವಾಕ್ಯ ಅಥವಾ ಕವಿತೆಯ ಸಾಲು ಅವತರಿಸಲು ಅಲ್ಲಾಹನಿಗೆ ಹಕ್ಕಿದೆ.**

ಈ ಮಾತು ಸಹ ಇಲ್ಲಿ ವಿವರಿಸಲು ಯೋಗ್ಯವಾಗಿದೆ ನಾನು ವಿಶೇಷವಾಗಿ ಅಲ್ಲಾಹನ ದೃಷ್ಟಾಂತ ರೂಪದಲ್ಲಿ ವಾಕ್ಚಾತುರ್ಯ ತನ್ನ ಬಗ್ಗೆ ಕಾಣುತ್ತೇವೆ. ಏಕೆಂದರೆ ನಾನು ಅರಬಿಯಲ್ಲಿ ಅಥವಾ ಉರ್ದುವಿನಲ್ಲಿ ಯಾವುದೇ ಬರಹ ಬರೆಯುವಾಗ ನನ್ನೊಳಗೆ ಯಾರೋ ಶಿಕ್ಷಣ ನೀಡುತ್ತಿರುವಂತೆ ಭಾವಿಸಿದಂತಾಗುತ್ತದೆ ಅರಬಿ ಬರಹ ಬರೆಯುವ ಸಮಯ ನೂರಾರು ಸಿದ್ಧ ನುಡಿಗಟ್ಟು ದಿವ್ಯವಾಣಿಯ ರೂಪದಲ್ಲಿ ಹೃದಯದ ಮೇಲೆ ಅವತರಿಸುತ್ತವೆ. ಅಥವಾ ಅಲ್ಲಾಹನ ದೂತನೊಬ್ಬನು ಒಂದು ಕಾಗದದ ಮೇಲೆ ಆ ವಾಕ್ಯಗಳನ್ನು ಬರೆದು ತೋರಿಸುವಂತೆ ಕಾಣುತ್ತೇನೆ. ಅದರಲ್ಲಿ ಕೆಲವು ಖುರ್‌ಆನ್‌ನ ವಚನಗಳಾಗಿರುತ್ತವೆ ಅಥವಾ ಅದರ ಸಮಾನವಾಗಿರುತ್ತವೆ. ಕೆಲ ಸಮಯದಲ್ಲಿ ಕೆಲ ಅವಧಿಯ ನಂತರ ತಿಳಿದುಬರುತ್ತದೆ. ಅರಬಿ ವಾಕ್ಯಗಳು ಅಲ್ಲಾಹನ ಕಡೆಯಿಂದ ದಿವ್ಯವಾಣಿ ಮೂಲಕ ಬಂದುದ್ದಾಗಿದೆ ಎಂದು. ಅವು ಒಂದು ಗ್ರಂಥದಲ್ಲಿ ಬಂದಿವೆ. ಹಾಗೆ ಅಲ್ಲಾಹನು ಪ್ರತಿ ಒಂದು ವಸ್ತುವಿನ ಮಾಲೀಕನಾಗಿದ್ದಾನೆ. ಆದುದರಿಂದ ಅವನಿಗೆ ಹಕ್ಕಿದೆ. ಯಾವುದೇ ಉತ್ತಮ ನುಡಿಗಟ್ಟು, ಅದು ಯಾವುದೇ ಗ್ರಂಥದ್ದಾಗಿರಲಿ ಅಥವಾ ಯಾವುದೇ ಉತ್ತಮ ಕವಿತೆಯ ಸಾಲಾಗಿರಲಿ, ಯಾವುದೇ ಕವನ ಸಂಗ್ರಹದ್ದಾಗಿರಲಿ ದಿವ್ಯವಾಣಿ ಮೂಲಕ ನನ್ನ ಹೃದಯದ ಮೇಲೆ ಅವತರಿಸಬಹುದು. ಇದಂತೂ ಅರಬಿ ಭಾಷೆಯ ಕುರಿತಾಯಿತು. ಆದರೆ ಅದಕ್ಕಿಂತ ಹೆಚ್ಚು ಆಶ್ಚರ್ಯದ ಮಾತು ಇದಾಗಿದೆ. ಕೆಲ ದಿವ್ಯವಾಣಿಗಳು ನನಗೆ ನಾನು ತಿಳಿಯದೆ ಇರುವಂತಹ ಭಾಷೆಗಳಲ್ಲೂ ಆಗುತ್ತದೆ. ಉದಾಹರಣೆಗೆ ಇಂಗ್ಲೀಷ್ ಅಥವಾ ಸಂಸ್ಕೃತ ಅಥವಾ ಇಬ್ರಾನಿ ಮುಂತಾದವು. ಬರಾಹೀನ್ ಅಹ್ಮದಿಯಾದಲ್ಲಿ ಕೆಲ ನಮೂನೆಗಳು ಅದರಲ್ಲಿ ಬರೆಯಲಾಗಿದೆ. ಅಲ್ಲಾಹನ ಮೇಲೆ ಆಣೆ ಮಾಡಿ ಅವನ ಕೈಯಲ್ಲಿ ನನ್ನ ಜೀವವಿದೆ. ಹೇಳುತ್ತೇನೆ, ಅದೇ ಅಲ್ಲಾಹನ ಅನುಗ್ರಹ ನನ್ನ ಜೊತೆಯಲ್ಲಿದೆ. ಮತ್ತೆ ಅದು ದೃಷ್ಟಾಂತಗಳ ವಿಧದಲ್ಲಿ ಒಂದು ದೃಷ್ಟಾಂತವಾಗಿದೆ. ಅದನ್ನು ನನಗೆ ದಯಪಾಲಿಸಿದ್ದಾನೆ. ವಿವಿಧ ರೀತಿಗಳಲ್ಲಿ ಅದೃಶ್ಯ ಮಾತುಗಳು ನನ್ನ ಮೇಲೆ ಅವತರಿಸುತ್ತವೆ. ನನ್ನ ಅಲ್ಲಾಹನಿಗೆ ಯಾವುದೇ ಹಂಗಿಲ್ಲ. ಯಾವುದೇ ಮಾತು ನನ್ನ ಮೇಲೆ ಅವತರಿಸಬಹುದು. ಅದು ಅರಬಿ ಅಥವಾ ಇಂಗ್ಲೀಷ್ ಅಥವಾ ಸಂಸ್ಕೃತ ಗ್ರಂಥದಲ್ಲಿರುವುದು ಆಗಬಹುದು. ಏಕೆಂದರೆ ನನಗೋಸ್ಕರ ಅವು ಅದೃಶ್ಯ ಮಾತ್ರವಾಗಿವೆ. (ಅದೇ ಪುಟ 434).

**ಯಾವುದೇ ಪುಸ್ತಕವು ತನ್ನ ಅದ್ಭುತ ಶಕ್ತಿಯಿಂದ ಹೊರಗುಳಿಯಲು ಸಾಧ್ಯವಿಲ್ಲ. ಇನ್ನೊಬ್ಬ ವ್ಯಕ್ತಿ ಅದನ್ನು ನಿರೂಪಿಸಲು ಸಾಧ್ಯವಾದರೆ ಮಾತ್ರ ಆ ಮಾತು ಹೇಳಬಹುದು. ಆದರೆ ಇಲ್ಲಿಯವರೆಗೆ ಯಾರು ಸಮರ್ಥನಾದನು?**

ಈ ಮಾತು ನೆನಪಿಡಲು ಯೋಗ್ಯವಾಗಿದೆ. ಈ ಮೇಲೆ ವ್ಯಕ್ತವಾದ ಆಕ್ಷೇಪಣೆ ಓರ್ವ ದಿವ್ಯವಾಣಿ ಪಡೆದ ವ್ಯಕ್ತಿಯ ಎದುರಿನಲ್ಲಿ ಅವನು ಅರಬಿ ಭಾಷೆಯಲ್ಲಿ ಹಲವು ವಾಕ್ಯಗಳು ಅಲ್ಲಾಹನಿಂದ ದಿವ್ಯವಾಣಿಗಳ ಮೂಲಕ ಪಡೆದಿರುತ್ತಾನೆಂಬುದು ಅಪ್ರಸ್ತುತವಾಗಿವೆ. ಏಕೆಂದರೆ ಅಲ್ಲಾಹನು ತನ್ನ ದಾಸರಿಗೆ ಈ ರೀತಿಯೂ ಸಹಕರಿಸಬಹುದು. ಒಂದು ಭಾಷಣ ಮಾಡುವ ಸಮಯ ಯಾವುದೇ ಗ್ರಂಥದ ಉತ್ತಮ ವಾಕ್ಯ ದಿವ್ಯವಾಣಿ ಮೂಲಕ ಅವನ ಹೃದಯದ ಮೇಲೆ ಅವತರಿಸಬಹುದು ಅಂತಹ ದಿವ್ಯವಾಣಿ ಆ ಬರಹವನ್ನು ಅದ್ಭುತ ಶಕ್ತಿಯಿಂದ ಹೊರತುಪಡಿಸುವುದಿಲ್ಲ. ಹೊರ ಹಾಕಲು ಯಾವಾಗ ಸಾಧ್ಯವಾಗುವುದೆಂದರೆ ಅಂಥದೇ ನಿರೂಪಣೆ ಇನ್ನೊಬ್ಬನ ವ್ಯಕ್ತಿಯಿಂದ ಆಗಬೇಕು. ಆದರೆ ಇಲ್ಲಿಯ ತನಕ ಯಾರೂ ಈ ವಿಷಯದಲ್ಲಿ ಸಮರ್ಥನಾಗಿದ್ದಾನೆ? ಯಾರೂ ಸ್ಪರ್ಧೆಗೆ ಬಂದಿರುತ್ತಾನೆ. ಸ್ವಯಂ ವಿದ್ವಾಂಸರ ದೃಷ್ಟಿಯಲ್ಲಿ ಈ ಅಲ್ಪ ಪ್ರಮಾಣದ ವಿಷಯದಲ್ಲಿ ಆಕ್ಷೇಪವೆತ್ತುವುದು ಸರಿಯಲ್ಲ. ಬದಲು ಪ್ರಶಂಸನಿಯವಾಗಿದೆ. ಏಕೆಂದರೆ ಅಧ್ಯಾಪನೆಯ ವಿವರಣೆಯ ರೀತಿಯೂ ಸಹ ಸಾಹಿತ್ಯಕ ಪ್ರೌಢತೆಯಲ್ಲಿ ಸೇರುತ್ತದೆ. ಮತ್ತದು ವಾಕ್ಚಾತುರ್ಯ ಎಂದು ಭಾವಿಸಲಾಗಿದೆ. ಯಾವ ಜನರು ಈ ಕಾರ್ಯದಲ್ಲಿ ಪಳಗಿದ್ದಾರೆ ಅವರೇ ಅಧ್ಯಾಪನೆಗಳಲ್ಲೂ ಪ್ರಭುತ್ವ ಹೊಂದಿರುತ್ತಾರೆ. ಪ್ರತಿಯೊಂದು ದಡ್ಡ ಹಾಗೂ ಅಜ್ಞಾನಿಯ ಈ ಕೆಲಸವಲ್ಲ. ಅಲ್ಲದೇ ನಮ್ಮ ದಾವೆ ಇದಾಗಿದೆ ನಮಗಿದು ಪವಾಡ ಸದೃಶ್ಯವಾಗಿ ಈ ಶಕ್ತಿ ಲಭಿಸಿದೆ. ಆದುದರಿಂದ ಖುರ್‌ಆನ್‌ನ ಸಾಕ್ಷ್ಯಗಳ ಲೋಕದ ಮುಂದೆ ವ್ಯಕ್ತಿಪಡಿಸಲು ಸಾಧ್ಯವಾಗಿದೆ. ಮತ್ತು ಕಪಟ ಸಾಹಿತ್ಯ ಅದು ಇಸ್ಲಾಮಿನಲ್ಲಿ ಸೇರಿ ಹೋಗಿದ್ದು. ಅದನ್ನು ಅಲ್ಲಾಹನ ಗ್ರಂಥಕ್ಕೆ ಸೇವಕನಾಗಿ ಮಾಡಲು. ಅಂದಹಾಗೆ ಈ ದಾವೆ ಕೇವಲ ಧಿಕ್ಕಾರದಿಂದ ಆಗುವಂತಹದ್ದೆ. ಎಲ್ಲಿಯವರೆಗೆ ಅಂದರೆ ನಿರೂಪಣೆ ಪ್ರಸ್ತುತಪಡಿಸುವುದಿಲ್ಲ. ಆಗದ ಮಾತಾಗಿದೆ. (ಅದೇ ಪುಟ 437).

**22 ವಾಕ್ಚಾತುರ್ಯ ಪೂರ್ಣ ಗ್ರಂಥಗಳ ಎದುರು ಒಂದು ಗ್ರಂಥವು ಸಹ ಯಾರು ಬರೆದು ತೋರಿಸಲಿಲ್ಲ. ಅವಿಶ್ವಾಸಿಗಳ ಹಾಗೆ "ತೌನಶಾವು ಲಖುಲ್‌ನ ಮಿಸಲ್ ಹಾಝಾ" ಎಂದೇ ಹೇಳುತ್ತಲಿದ್ದರು.**

ಈ ಜನರಿಗೆ ಒಂದಿಷ್ಟಾದರೂ ನಾಚಿಕೆಯಿರುತ್ತಿದ್ದರೆ, ನಾಚಿಕೆಯಿಂದ ಜೀವ ಕಳೆದುಕೊಳ್ಳುತ್ತಿದ್ದರು. ಯಾವ ವ್ಯಕ್ತಿಯನ್ನು ಅರಬಿ ಭಾಷೆಯ ಬಗ್ಗೆ ಕಿಂಚಿತ್ತು ಜ್ಞಾನ ಹೊಂದಿಲ್ಲ ಎನ್ನುತ್ತಿದ್ದರು. ಅವನಾದರೂ ಅಷ್ಟೊಂದು ವಾಕ್ಚಾತುರ್ಯ ಪೂರ್ಣ ಅರಬಿಯಲ್ಲಿ ಗ್ರಂಥಗಳನ್ನು ರಚಿಸಿದ್ದನು. ಆದರೆ ಸ್ವಯಂ ಪ್ರತಿಭೆ ಮತ್ತು ಸಾಮರ್ಥ್ಯ ಹೇಳಿಕೊಂಡವರು. ಸುಮಾರು ಹತ್ತು ವರ್ಷಗಳು ಆಗುತ್ತಲಿವೆ. ನಿರಂತರ ಅವರಿಂದ ಸ್ಪರ್ಧೆಗೆ ಆಹ್ವಾನಿಸುತ್ತಿದ್ದೆವು, ತನ್ನ ಎದುರಿನಲ್ಲಿ ಒಂದು ಗ್ರಂಥ ಸಹ ಬರೆದು ತೋರಿಸಲು ಆಗಲಿಲ್ಲ. ಏನೂ ಮಾಡಲಾಗಲಿಲ್ಲ. ಮಕ್ಕದ ಅವಿಶ್ವಾಸಿಗಳಂತೆ ಅದೇ ಹೇಳಿಕೊಂಡಿದ್ದರು. ತೌನಶಾವು. ನಾವು ಬಯಸಿದರೆ ಅದರಂತೆ ಹೇಳಬಹುದು. ಆದರೆ ಅವರಿಗೆ ಬಯ್ಯೆಗಳನ್ನು ಹೇಳಲಾಗದು. ಪುರುಸ್ತೊತ್ತಿದ್ದರೆ ಒಂದು ಅರಬಿ ಪತ್ರಿಕೆ ಹೊರಡಿಸಲು ಪುರುಸೊತ್ತಿಲ್ಲ. ಯಾವ ರೀತಿ ಸಾವಿರಾರು ಜಾಹೀರಾತುಗಳು ಬಯ್ಯುಗಳಿಂದ ತುಂಬಿ ಪ್ರಕಟಪಡಿಸುತ್ತಿದ್ದಾರೆ. ಮತ್ತೇನು ಕಾರಣವಿದೆ. ಅರಬಿ ಗ್ರಂತ ಪ್ರಕಟಪಡಿಸಲು ಅವರ ಬಳಿ ಏನೂ ಇಲ್ಲ. ಯಾವುದೇ ಬುದ್ಧಿವಂತನು ಇಂತಹ ನೆಪಗಳನ್ನು ಹೇಳಿ ಕೇವಲ ಕೆಲವೇ ವಾಕ್ಯಗಳಲ್ಲಿ, ಇಪ್ಪತ್ತು ಸಾವಿರ ವಾಕ್ಯಗಳಲ್ಲಿ ಹುಡುಕಿ ತೋರಿಸಿ. ಇವು ಕದ್ದು ಬರೆದದ್ದಾಗಿ ಎಂದು ಹೇಳುವುದು ಪರಲೆ ದರ್ಜೆಯ ನಾಚಿಕೆಗೇಡುತನವಾಗಿದೆ. ಅಂತಹ ನಾಚಿಕೆಗೇಡುತನ ಪೀರ್ ಮೆಹರ್ ಅಲಿ ಶಾ ಹೊರತು ಯಾಋಊ ಸಹ ಅಂತಹ ಮಹಾನತೆ ತೋರಿಸಲಾರರು.

**ಕದ್ದು ಪುಸ್ತಕಗಳನ್ನು ರಚಿಸಬಹುದಾದರೆ ಯಾರೂ ನಿಮ್ಮನ್ನು ಅದರಿಂದ ತಡೆಹಿಡಿದ್ದಾರೆ.**

ಓ ಮೂಢರೇ! ಶೈಕ್ಷಣಿಕ ಮತ್ತು ಧಾರ್ಮಿಕ ಗ್ರಂಥಗಳು ಸಾವಿರಾರು ಜ್ಞಾನ ಮತ್ತು ಸಾಕ್ಷ್ಯಗಳಿಂದ ಕೂಡಿದ್ದಾಗಿವೆ. ಕೇವಲ ಅನರ್ಥ ಕಾದಂಬರಿಗಳಂತೆ ಕದ್ದು ರಚಿಸಬಹುದಾದರೆ ಈ ಸಮಯ ಯಾರೂ ನಿಮ್ಮ ಬಾಯಿಗಳನ್ನು ಮುಚ್ಚಿಟ್ಟಿದ್ದಾರೆ. ಕದ್ದು ಬರೆಯುವಂತಹ ಪುಸ್ತಕಗಳು ಪೇಟೆಯಲ್ಲಿ ಸಿಗುತ್ತಲಿವೆ. ಆ ಹೇಳಿದ ಶಾಪಗಳನ್ನು ನೀವು ಹೇಗೆ ಜೀರ್ಣಿಸಿಕೊಂಡಿದ್ದೀರಿ. ನೀವು ಮೌನವಹಿಸಿಕೊಂಡಾಗ ನಾವು ಎಷ್ಟೋ ಸವಾಲು ಹಾಕಿದೆವು. ಏಕೆ ಒಂದು ಅಧ್ಯಾಯದ ಸಹ ತಫ್ಸೀರ್ ಅರಬಿಯಲ್ಲಿ ಬರೆದು ಪ್ರಕಟಿಸಲಿಲ್ಲ. ಲೋಕವು ನಿಮ್ಮ ಅರಬಿ ಸಾಮರ್ಥ್ಯ ಎಷ್ಟಿದೆ ಎಂಬುದು ನೋಡುತಿತ್ತು. ನಿಮ್ಮ ಇರಾದೆ ಚೆನ್ನಾಗಿರುತ್ತಿದ್ದರೆ ನನ್ನ ಎದುರಿನಲ್ಲಿ ತಫ್ಸೀರ್ ಬರೆಯಲು ಒಂದು ಸಭೆ ಸೇರುತ್ತಿದ್ದೀರಿ. ಅದರಿಂದ ಸುಳ್ಳುಗಾರನ ಮುಖಭಂಗವಾಗುತಿತ್ತು. ಆಗಲಿ ಲೋಕವೆಲ್ಲವು ಕುರುಡಲ್ಲ. ಯೋಚಿಸುವವರು ಸಹ ಇದ್ದಾರೆ. (ಅದೇ ಪುಟ 140) ಈ ಬಹುಮಾನದ ಪಂಥಾಹ್ವಾನ ಕುರಿತು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಅಧ್ಯಾಪನೆಗಳು ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ಪ್ರಕಟಪಡಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

***************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅದಕ್ಕೆ ಅವರು ಕೆಲ ಕುಟುಂಬಗಳಿಗೆ ಮತ್ತು ಮನೆತನಕ್ಕೆ ಅದನ್ನು ವಿಶಿಷ್ಟಗೊಳಿಸಿಕೊಳ್ಳುತ್ತಾರೆ. ಹೀಗೆ ಪ್ರಭುತ್ವ ಸ್ಥಾಪಿಸಿಕೊಳ್ಳುತ್ತಾರೆ. ಕೆಲ ಕುಟುಂಬಗಳು ಮಾತ್ರ ಆಡಳಿತಕ್ಕೆ ಅರ್ಹರು ಎಂದು ಸಾರಲಾಗುತ್ತದೆ. ಅವರು ಪ್ರಜೆಗಳಿಂದ ಯಾವ ಸಲಹೆಯನ್ನು ಪಡೆಯುವುದಿಲ್ಲ ಮತ್ತು ಪ್ರಜೆಗಳ ಸರಕಾರಗಳಲ್ಲಿ ಯಾವ ಪಾಲು ಇರುವುದಿಲ್ಲ. ಅದಲ್ಲದೇ ಕೆಲ ಧಾರ್ಮಿಕ ಮುಖಂಡರು ಪೀರ್, ಮಾಟ ಮಾಡುವರು ಮಾನವರ ಹಕ್ಕುಗಳನ್ನು ಕಸಿದುಕೊಳ್ಳುತ್ತಾರೆ. ಧರ್ಮವು ಪಂಡಿತರ ಮೌಲ್ವಿಗಳ ಮತ್ತು ಪಾದರಿಗಳ ಆಸ್ತಿಯಾಗಿ ಬಿಡುತ್ತದೆ. ಪ್ರಜೆಗಳಿಗೆ ಧರ್ಮದ ಜ್ಞಾನ ನೀಡಲಾಗುವುದಿಲ್ಲ, ಅದರಲ್ಲಿ ಆಸಕ್ತಿ ಮೂಡುವಂತಹ ಮಾರ್ಗವು ಮಾಡಿಕೊಡುವುದಿಲ್ಲ, ಪ್ರಜೆಗಳ ಕೆಲಸ ಕೇವಲ ಧಾರ್ಮಿಕ ಮುಖಂಡರುಗಳ ಚೇಳಾವಾಗಿರುವುದಾಗಿದೆ ಎಂದು ಭಾವಿಸಲಾಗುತ್ತದೆ. ಧಾರ್ಮಿಕ ಗ್ರಂಥಗಳ ಮೇಲೆ ಸ್ವಯಂ ಗಮನಹರಿಸುವುದಾಗಲೀ ಮತ್ತು ಅದರಿಂದ ಪ್ರಯೋಜನ ಪಡೆಯುವುದರ ಕಾರ್ಯವಾಗಿ ಉಳಿಯುವುದಿಲ್ಲ.

ಅಂತೂ ಸಮುದಾಯಗಳು ನುಬುವ್ವತ್ (ಪ್ರವಾದಿತ್ವ) ಕಾಲದಿಂದ ದೂರವಾದರೆ ಅವರ ಹಕ್ಕುಗಳು ಕೆಲ ಕುಟುಂಬಗಳ ಕಪಿಮುಷ್ಟಿಯಲ್ಲಿ ಸಾಗತೊಡಗುತ್ತದೆ. ಆಗ ಸಾರ್ವಜನಿಕರು ಲೋಕದ ವ್ಯವಹಾರಗಳಲ್ಲಿ ಸಲಹೆ ನೀಡುವ ಅಥವಾ ವಿಚಾರ ವಿನಿಯಮ ಮಾಡಿಕೊಳ್ಳಲು ಅರ್ಹರಲ್ಲ ಎಂದು ಭಾವಿಸಿಕೊಳ್ಳುತ್ತಾರೆ ಮತ್ತು ಈ ಅಂತರವನ್ನು ಅವರ ಅಸಮರ್ಥತೆ ಎಂದು ಸಾರಲಾಗುತ್ತದೆ. ರಾಜನ ಓರ್ವ ಮೂಢ ಮಗನು ಸಹ ಲೋಕದ ನೇತಾರನೆಂದು ಭಾವಿಸುತ್ತಾರೆ. ಆ ಮೂಢನು ಸ್ವಯಂ ಒಬ್ಬ ಅಹಂಕಾರಿಯಾಗಿರುತ್ತಾನೆ. ಅವನು ಲೋಕದ ಮುಂದೆ ಯಾವುದೇ ಯೋಜನೆಯ ಘೋಷಣೆ ಮಾಡಿದರೆ ಅದರಲ್ಲಿ ಜಂಭಕೊಚ್ಚಿಕೊಳ್ಳುವಂತಹ ಮಾತುಗಳು ಮಾತ್ರ ಇರುತ್ತವೆ. ನನ್ನಂತಹ ರಾಜಕುಮಾರನು ನಿಮಗೆ ದೊರೆತದ್ದು ನಿಮ್ಮ ಸೌಭಾಗ್ಯವಾಗಿದೆ ಎಂಬಂತಹ ದೊಡ್ಡ ದೊಡ್ಡ ಬಡಾಯಿ ಮಾತುಗಳನ್ನು ಆಡುತ್ತಾರೆ.

ಅದೇ ಸ್ಥಿತಿ ಧಾರ್ಮಿಕ ಲೋಕದ್ದಾಗಿರುತ್ತದೆ. ಮೌಲ್ವಿಗಳ ಪುತ್ರರು ಅರ್ಧ ಜ್ಞಾನವುಳ್ಳವರಾದರು ಮತ್ತು ಚಿಂತನ ಮಂಥನದ ಶಕ್ತಿಯಿಲ್ಲದಿದ್ದರೂ, ಕೇವಲ ಮೌಲ್ವಿಗಳ ಪುತ್ರರು ಎಂಬ ಕಾರಣಕ್ಕೆ ಅವರು ತಾವು ಹೇಳಿದಂತೆ ಜನರನ್ನು ಕೇಳುವಂತೆ ರೂಢಿ ಹಾಕಿಕೊಳ್ಳುತ್ತಾರೆ. ಯಾರಾದರೂ ಅವರ ಮುಂದೆ ಅಲ್ಲಾಹನ ನಿಜವಾದ ಶಿಕ್ಷಣದ ಮಾತುಗಳನ್ನು ಹೇಳಿದರೆ ಅದನ್ನು ಅವರು ಸುಳ್ಳು ಕಥೆಗಳು ಮತ್ತು ಅರ್ಥವಿಲ್ಲದ್ದು ಎಂದು ಸಾರಿ ಅವರನ್ನು ನಂಬದವರಿಗೆ ಕಾಫಿರ್‌ಗಳು ಎಂದು ಸಾರುತ್ತಾರೆ.

ಅಂತಹ ಸಂದರ್ಭದಲ್ಲಿ ಕೇವಲ ಒಬ್ಬ ದೇವನ ಸಂದೇಶವಾಹಕನು (ಪ್ರವಾದಿ) ಮಾತ್ರ ಸಹಾಯಕ್ಕೆ ಬರುವನು. ಮತ್ತು ಎಲ್ಲಾ ನ್ಯೂನತೆಗಳಿಗೆ ಚಿಕಿತ್ಸೆ ಮಾಡಿಕೊಡುವನು. ಅವನು ಆಗಮಿಸಿದಾಗ ತನ್ನನ್ನು ತಾನು ಪಂಡಿತ ಎನ್ನುವವರು ಅವನನ್ನು ಗುರುತಿಸಲಾರರು. ಜನಸಾಮಾನ್ಯರು ಅಜ್ಞಾನಿ ಎಂದು ಭಾವಿಸುವರು ತನ್ನ ಬುದ್ಧಿವಂತಿಕೆಯಿಂದ ಮತ್ತು ಪರಿಶುದ್ಧತೆ ಕಾರಣಗಳಿಂದ ಅವರ ಮೇಲೆ ವಿಶ್ವಾಸ ತರುತ್ತಾರೆ. ಆಗ ಅಲ್ಲಾಹನ ದೂತರ ಮತ್ತು ಸೈತಾನನ ಮಧ್ಯೆ ಯುದ್ಧ ಪ್ರಾರಂಭವಾಗುತ್ತದೆ. ಯಾವುದಕ್ಕೂ ಲಯಕ್ಕಲ್ಲ ಎಂದು ಭಾವಿಸಿದ್ದರು. ತನ್ನ ಸಾಮರ್ಥ್ಯದ ಹೆಸರಿನಲ್ಲಿ ಮಾನವ ಕುಲವನ್ನು ಗುಲಾಮರಾಗಿ ಮಾಡುವವರ ಒಂದೊಂದು ಕಾರ್ಯವನ್ನು ಯಾವ ರೀತಿ ತುಳಿದು ಹಾಕುತ್ತಾರೆಂದರೆ, ಒಂದು ಹದ್ದು ಸತ್ತ ಪ್ರಾಣಿಯ ಮಾಂಸವನ್ನು ಕಿತ್ತು ಕಲ್ಲುಗಳ ಮೇಲೆ ಬಡಿಯುವಂತೆ ಆಗುತ್ತದೆ. ಆಗ ಸ್ವಯಂ ಘೋಷಿತ ಪಂಡಿತರ ಬಂಡವಾಳ ಬಯಲಾಗುತ್ತದೆ. ಕಳೆದ ಅವಧಿಗಳಿಂದ ಶೋಷಣೆಗೆ ಒಳಗಾದವರಿಗೆ ಮತ್ತೆ ಮುಂಬರುವ ಅವಕಾಶ ದೊರೆಯುತ್ತದೆ. ಮಾನವೀಯತೆ ಮತ್ತೊಂದು ಸಲ ಸ್ವಾತಂತ್ರ್ಯದ ಶ್ವಾಸ ಪಡೆಯುವಂತಾಗುತ್ತದೆ. ಅದೇ ಸಾರ ಈ ವಚನದಲ್ಲಿ ವಿವರಿಸಿ ಹೇಳಲಾಗಿದೆ. ಯಾರ ಪರ ಅಲ್ಲಾಹನ ಅನುಗ್ರಹವಿರುವುದೋ ಅವರು ತಮಗೆ ಬಂಧಿಗಳಾಗಿ ಮಾಡಿದವರನ್ನು ಎಂದೂ ತನ್ನ ಭಾಗಿಯನ್ನಾಗಿ ಮಾಡುವುದಿಲ್ಲ. ಎಂದಾದರೂ ಅವರು ಮಾನವ ಕುಲಕ್ಕೆ ಅಂತಹ ಜನರಿಗೆ ಅವರ ಅಭಿಪ್ರಾಯಗಳನ್ನು ಹೇಳುವಂತೆ ಮತ್ತು ಅವರ ಕಾರ್ಯಗಳಿಗೆ ಸ್ವಾತಂತ್ರ್ಯ ನೀಡಿರುವುದು ಇದೆಯೇ, ಇಲ್ಲ ಎಂದಾದರೆ ಪ್ರವಾದಿಗಳಿಗೆ ಅಲ್ಲದೇ ಮನುಷ್ಯನ ಪ್ರಗತಿಗೆ ಯಾವ ಮಾರ್ಗ ಉಳಿಯುತ್ತದೆ? ಈ ಸಾಕ್ಷ್ಯದಲ್ಲಿ ನುಬುವ್ವತ್ತಿನ ಅವಶ್ಯಕತೆ ಸಾಬೀತುಪಡಿಸಲಾಗಿದೆ. ಅದು ಎಂತಹ ಶಕ್ತಿಯುತ ಸಾಕ್ಷ್ಯವಾಗಿದೆ ಎಂದರೆ ಅದನ್ನು ಪ್ರತಿಬುದ್ಧಿವಂತಿಕೆಯುಳ್ಳವನು ಅದನ್ನು ಕಂಡು ಹೀಗೆ ಹೇಳದೇ ಇರಲಾರನು. ನುಬುವತ್ತಿನ ಹೊರತು ಎಂದೂ ಲೋಕವು ತಮ್ಮ ಹಕ್ಕುಗಳನ್ನು ಸಾದಿಸಲಾರದು. ಈ ಅನುಗ್ರಹ ಎಲ್ಲಿಯವರೆಗೆ ಪದೇ ಪದೇ ಲಭಿಸದಿದ್ದರೆ ಮನುಷ್ಯನ ಹೆಜ್ಜೆ ಅ ಪ್ರಗತಿಯತ್ತ ಸಾಗಲಾರದು.

**"ಅಫ ಬಿನಿಮತಿಲ್ಲಾಹಿ ಯಜ್‌ಹದೂನ್"** ವಚನವು ಸಾರ್ವಜನಿಕರಿಗೆ ಎಚ್ಚರಿಸಿದೆ. ಈ ಪ್ರವಾದಿಯು ನಿಮ್ಮ ಸ್ವಾತಂತ್ರ್ಯಕ್ಕಾಗಿ ಆಗಮಿಸಿರುತ್ತಾನೆ. ನೀವು ಅವನನ್ನು ಕಡೆಗಾಣಿಸಿ ಅದೇ ದುಷ್ಕರ್ಮಿಗಳೊಂದಿಗೆ ಸೇರಿ ಕಾರ್ಯ ಮಾಡುತ್ತಿದ್ದೀರಿ. ಅವರುಗಳು ನಿಮ್ಮ ಹಕ್ಕುಗಳನ್ನು ದಮನಿಸುವ ಮೂಲಕ ನಿಮ್ಮ ಮೇಲೆ ಪ್ರಭುತ್ವ ಸಾಧಿಸಿದ್ದಾರೆ. **(ತಫ್ಸೀರ್ ಕಬೀರ್, ಸಂಪುಟ-4, ಪುಟ-198, ಮುದ್ರಣ 2010 ಖಾದಿಯಾನ್)**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ**
**ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**ಕಾಬುಲ್ ದೇಶದಲ್ಲಿ ಯಾವಾಗ ಅಲ್ಲಿನ ಜನರು ಸರ್ವಶಕ್ತನಾದ ಅಲ್ಲಾಹನ ಕಡೆ ಮರಳುತ್ತಾರೊ ಮತ್ತು ಅಲ್ಲಾಹನ ಸಂದೇಶವಾಹಕನನ್ನು ಕೇಳುತ್ತಾರೊ ಅವಾಗ ಅಲ್ಲಿ ಶಾಂತಿ ಸ್ಥಾಪಿತವಾಗುತ್ತದೆ**

**ಓರ್ವ ಅಹ್ಮದಿ ಮುಸ್ಲಿಂ ಸಂಶೋಧಕನು ಆಳವಾದ ಆಲೋಚನೆಗಳನ್ನು ಹೊಂದಬೇಕು ಮತ್ತು ಅವರ ಸಂಶೋಧನೆಗಾಗಿ ಅಲ್ಲಾಹನ ಬಳಿ ದುಆ ಮಾಡಬೇಕು ಅವರು ಮಾಡುತ್ತಿರುವ ಸಂಶೋಧನೆಯು ಎಷ್ಟು ಪ್ರಯೋಜನಕಾರಿಯಾಗಬೇಕು ಎಂದರೆ ಇಡೀ ಮಾನವಕುಲವು ಅದರಿಂದ ಪ್ರಯೋಜನ ಪಡೆಯಬೇಕು ಮತ್ತು ಇಡೀ ಜಗತ್ತು ಪ್ರಯೋಜನವನ್ನು ನೀಡಬೇಕು ಮತ್ತು ತೌಹೀದ್ ಅನ್ನು ಸ್ಥಾಪಿತಗೊಳಿಸುವಂತಿರಬೇಕು.**

## ಜರ್ಮನಿಯ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ (ಆನ್‌ಲೈನ್) ಇಜ್ತಿಮಾದ ಸಂದರ್ಭದಲ್ಲಿ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ರವರು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದರು

ಆಗಸ್ಟ್ 22, 2021ರಂದು, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿಯ ವಿದ್ಯಾರ್ಥಿಗಳು ಸಾಲಾನ ಇಜ್ತಿಮಾದ ಸಂದರ್ಭದಲ್ಲಿ ಸಮಾರೋಪ ಸಮಾರಂಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರೊಂದಿಗೆ ಆನ್‌ಲೈನ್‌ನಲ್ಲಿ ಭೇಟಿಯಾಗುವ ಅನುಗ್ರಹ ಪಡೆದರು.

ಈ ಸಭೆಗಾಗಿ ಹುಝೂರ್ ಅನ್ವರ್(ಅತಬಿಅ)ರವರು ಇಸ್ಲಾಮಾಬಾದ್ (ಟಿಲ್ಫೋರ್ಡ್) ನಲ್ಲಿರುವ ತಮ್ಮ ಕಚೇರಿಯಲ್ಲಿ ಆಸೀನರಾಗಿದ್ದರು, ಮತ್ತು 1700 ಕ್ಕೂ ಹೆಚ್ಚು ಖುದ್ದಾಮ್‌ರವರು FSV ಸ್ಟೇಡಿಯಂ ಫ್ರಾಂಕ್‌ಫರ್ಟ್‌ನಿಂದ ಆನ್‌ಲೈನ್‌ನಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಹುಝೂರೆ ಅನ್ವರ್(ಅತಬಿಅ) ಅವರ ಅನುಗ್ರಹದಾಯಕ ಉಪಸ್ಥಿತಿಯ ಸಂದರ್ಭದಲ್ಲಿ ಮೇಲಾವರಣವಿಲ್ಲದೆ ನೆಲದಲ್ಲಿ ಕುಳಿತಿರುವಾಗ ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿತು. ಹುಝೂರ್ ಅನ್ವರ್(ಅತಬಿಅ) ಅವರು ಯಾವುದೇ ತೊಂದರೆಗಳನ್ನು ಎದುರಿಸುತ್ತಿಲ್ಲವೇ ಎಂದು ಸಭಿಕರನ್ನು ಕೇಳಿದರು, ಇದಕ್ಕೆ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿಯ ಅಧ್ಯಕ್ಷರು ಹುಝೂರ್, ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ ಮತ್ತು ಇನ್‌ಶಾಅಲ್ಲಾಹ್ ನಾವು ಕುಳಿತುಕೊಳ್ಳುತ್ತೇವೆ ಎಂದು ಉತ್ತರಿಸಿದರು. ಯಾವುದೇ ರೀತಿಯ ಮಳೆಯಾಗಲಿ ಇನ್‌ಶಾಅಲ್ಲಾಹ್.

ತದನಂತರ ಪವಿತ್ರ ಖುರ್‌ಆನ್ ಪಠಿಸಲಾಯಿತು ಮತ್ತು ನಂತರ ಮಜ್ಲಿಸ್ ಖುದ್ದಾಮ್-ಉಲ್-ಅಹ್ಮದಿಯಾ ಸದಸ್ಯರು ಪ್ರಶ್ನೆಗಳನ್ನು ಕೇಳಲು ಅವಕಾಶವನ್ನು ಪಡೆದರು.

ಓರ್ವ ಖಾದಿಮ್ ಹುಝೂರ್ ಅನ್ವರ್(ಅತಬಿಅ) ಅವರಿಗೆ, ಕಾಬುಲ್‌ನ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಒಂದು ಭವಿಷ್ಯವಾಣಿಯನ್ನು ಉಲ್ಲೇಖಿಸುತ್ತಾ, ಕಾಬುಲ್‌ನ ಭೂಮಿ ಎಂದಾದರೂ ಶಾಂತಿಯಿಂದ ಆಶೀರ್ವದಿಸಲ್ಪಡುತ್ತದೆಯೇ ಮತ್ತು ಹೇಗೆ? ಎಂದು ಕೇಳಿದರು.

ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಹೇಳಿದರು: ಕಾಬುಲ್ ದೇಶದಲ್ಲಿ ಶಾಂತಿ ನೆಲೆಸಲಿದೆ. ಈ ಜನರು ಸರ್ವಶಕ್ತನಾದ ಅಲ್ಲಾಹನ ಕಡೆಗೆ ತಿರುಗಿದಾಗ ಮತ್ತು ಸರ್ವಶಕ್ತ ಅಲ್ಲಾಹನ ಸಂದೇಶವಾಹಕರ ಮಾತುಗಳನ್ನು ಕೇಳಿದಾಗ ಅದು ಸಂಭವಿಸುತ್ತದೆ. ಮತ್ತು ಅವರು ಮಾಡಿದ ಹಿಂಸಾಚಾರವನ್ನು ಅವರು ಗುಣಪಡಿಸುತ್ತಾರೆ ಮತ್ತು ಇದಕ್ಕೆ ಪರಿಹಾರವೆಂದರೆ ಅಲ್ಲಾಹನು ಈ ಯುಗದಲ್ಲಿ ಇಮಾಮನ್ನು ಕಳುಹಿಸಿದ್ದಾನೆ, ಪ್ರವಾದಿ ಮುಹಮ್ಮದ್(ಸ) ಅವರ ಗುಲಾಮರನ್ನು ಹೊಸದಾಗಿ ಧರ್ಮವನ್ನು ಬೋಧಿಸಲು ಕಳುಹಿಸಿದ್ದಾನೆ. ಅವರು ಅದನ್ನು ಜಗತ್ತಿನಾದ್ಯಂತ ಹರಡಿಸಿ ಅದರ ಮೇಲೆ ಇಮಾನ್ ಇರಿಸಿದರೆ ಮಾತ್ರ ಇಡೀ ಜಗತ್ತಿನಲ್ಲಿ ಶಾಂತಿ ಸ್ಥಾಪನೆಯಾಗುತ್ತದೆ ಮತ್ತು ಇದು ಕಾಬೂಲ್‌ಗೂ ಸಹ ಅನ್ವಯವಾಗುತ್ತದೆ. ಇಲ್ಲದಿದ್ದರೆ, ಅಲ್ಲಿ ಯುದ್ಧಗಳು, ಗಲಭೆಗಳು ಮತ್ತು ಜಗಳಗಳು ನಡೆಯುತ್ತಲೇ ಇರುತ್ತವೆ ಮತ್ತು ಮುಸ್ಲಿಂ ಉಮ್ಮಾದ ಸಾಮಾನ್ಯ ಪರಿಸ್ಥಿತಿಯನ್ನು ನೋಡಿ. ನಾವು ಅನ್ಯಾಯ ಮಾಡುವುದಿಲ್ಲ ಎಂದು ಹೇಳುತ್ತಾರೆ. ಪವಿತ್ರ ಖುರ್‌ಆನ್‌ನಲ್ಲಿ, ಸರ್ವಶಕ್ತನಾದ ಅಲ್ಲಾಹನು ಓರ್ವ ಮುಮಿನ್‌ನ ಜೀವ ತೆಗೆಯುವುದು, ಓರ್ವ ಕಲಿಮ ಓದುವವನನ್ನು ಕೊಲ್ಲುವುದು ನಿಮ್ಮನ್ನು ನರಕಕ್ಕೆ ಕೊಂಡೊಯ್ಯುತ್ತಾನೆ ಎಂದು ಹೇಳುತ್ತಾನೆ. ಆದರೆ ಇವರೆಲ್ಲರು ಕಲಿಮ ಪಠಿಸುವವರನ್ನು ಕೊಲ್ಲುತ್ತಾ ಇದ್ದಾರೆ. ಹೀಗೆ ಶಾಂತಿ ಸ್ಥಾಪನೆಯಾಗುವುದಿಲ್ಲ. ಅಲ್ಲಾಹನ ಆಜ್ಞೆಗಳನ್ನು ಪಾಲಿಸಬೇಕು. ಅಲ್ಲಾಹನ ಮಾತುಗಳನ್ನು ಪಾಲಿಸಿದರೆ ಮಾತ್ರ ಶಾಂತಿ ನೆಲೆಸುತ್ತದೆ. ಅಲ್ಲಾಹನು ಕಳುಹಿಸಿದ್ದನ್ನು ನಾವು ವಿರೋಧಿಸುವುದನ್ನು ನಿಲ್ಲಿಸಿದರೆ ಶಾಂತಿ ಸ್ಥಾಪನೆಯಾಗುತ್ತದೆ ಮತ್ತು ಈ ಸಂದೇಶವನ್ನು ತಿಳಿಸುವುದನ್ನು ಮುಂದುವರಿಸುವುದು ಮತ್ತು ಅಲ್ಲಾಹನು ಈ ಜನರಿಗೆ ಬುದ್ಧಿವಂತಿಕೆಯನ್ನು ನೀಡಲಿ ಮತ್ತು ನಂಬಿಕೆಯುಳ್ಳವರಾಗಿರಲು ಪ್ರಯತ್ನಿಸುವುದು ಮತ್ತು ಪ್ರಾರ್ಥಿಸುವುದು ನಮ್ಮ ಕಾರ್ಯವಾಗಿದೆ. ಅಥವಾ ಕನಿಷ್ಠ ಅವರು ತಮ್ಮ ನಡವಳಿಕೆಯನ್ನು ಸರಿಪಡಿಸಿಕೊಳ್ಳಬೇಕು, ದೌರ್ಜನ್ಯವನ್ನು ಕೊನೆಗೊಳಿಸಬೇಕು, ಇನ್ನೂ ಶಾಂತಿ ಸ್ಥಾಪನೆಗೆ ಅವಕಾಶವಿದೆ ಮತ್ತು ಅಲ್ಲಾಹನು ಕ್ಷಮಿಸುವವನಾಗಿದ್ದಾನೆ ಮತ್ತು ಕ್ಷಮಿಸುತ್ತಾನೆ.

ನಂತರ ಮತ್ತೋರ್ವ ಖಾದಿಮ್ ಕೇಳಿದರು ಜರ್ಮನಿಯಲ್ಲಿ ಕೆಲವು ತಿಂಗಳುಗಳಲ್ಲಿ ರಾಜಕೀಯ ಚುನಾವಣೆಗಳು ನಡೆಯಲಿವೆ, ಅದು ದೊಡ್ಡ ರಾಜಕೀಯ ಬದಲಾವಣೆಯನ್ನು ತರುತ್ತದೆ ಏಕೆಂದರೆ ಪ್ರಸ್ತುತ ಚಾನ್ಸೆಲರ್ ಅನ್ನು ಮರು ಆಯ್ಕೆ ಮಾಡಲಾಗುವುದಿಲ್ಲ.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಕೇವಲ ನಿವೃತ್ತಿಯಾಗುತ್ತಿದ್ದಾರೆ ಹಾಗಾಗಿ ಮತ್ತೆ ಅವರು ಬರುವುದಿಲ್ಲ. ಹಾಗಾಗಿ ಅವರ ಪಕ್ಷ ಗೆದ್ದರೆ ನೀತಿ ಹಾಗೆಯೇ ಉಳಿಯುತ್ತದೆ. ಅವರ ಪಕ್ಷ ಗೆದ್ದರೆ ಸಮಾನ್ಯವಾಗಿ ಪಕ್ಷದ ನೀತಿ ಬಹುತೇಕ ಒಂದೇಯಾಗಿರುತ್ತದೆ. ಕುಲಪತಿಗಳು ಸ್ವಂತ ಇಚ್ಛೆಯಿಂದ ಮಾಡುತ್ತಿರುವ ಕೆಲವು ಕೆಲಸಗಳಿವೆ. ಇನ್ನೊಂದು ಪಕ್ಷ ಬಂದರೆ ಅವರ ನೀತಿಗಳೂ ಒಳಗೊಳ್ಳುತ್ತವೆ, ಇಸ್ಲಾಂ ವಿರೋಧಿ ಪಕ್ಷಗಳು ಅಥವಾ ಬಲಪಂಥೀಯ ಪಕ್ಷಗಳನ್ನು ಹೊರತುಪಡಿಸಿ, ಅವರು ಗೆದ್ದರೆ ಮುಸ್ಲಿಮರಿಗೆ ಕೆಲವು ಸಮಸ್ಯೆಗಳು ಉದ್ಭವವಾಗಬಹುದು ಆದರೆ ನನ್ನ ಅಭಿಪ್ರಾಯದಲ್ಲಿ ಜರ್ಮನಿಯಲ್ಲಿ ಮುಸ್ಲಿಮರ ವಿರುದ್ಧ ಒಂದು ವಿಷಯ ಅಥವಾ ವಿದೇಶಿಯರ ವಿರುದ್ಧ ಭಾವನೆಗಳು, ಆಲೋಚನೆಗಳು ಇವೆ, ಆದರೆ ಇನ್ನೂ ಬಲಪಂಥೀಯ ಪಕ್ಷಗಳು ಗೆಲ್ಲುವುದಕ್ಕೆ ಸಾಧ್ಯವಿಲ್ಲ. ಇದು ನನ್ನ ಅಭಿಪ್ರಾಯವಾಗಿದ್ದು, ಹೊಂದಾಣಿಕೆ ಮಾಡಿಕೊಂಡಿರುವ ಪಕ್ಷಗಳು ಗೆಲ್ಲುತ್ತವೆ.

ಮತ್ತೋರ್ವ ಖಾದಿಮ್ ಹುಝೂರ್ ಅನ್ವರ್(ಅತಬಿಅ) ಅವರಿಗೆ ಅಹ್ಮದಿ ಸಂಶೋಧಕರು ಯಾವ ಮನಸ್ಥಿತಿಯೊಂದಿಗೆ ಸಂಶೋಧನೆ ಮಾಡಬೇಕು ಎಂದು ಕೇಳಿದರು?

ಈ ಪ್ರಶ್ನೆಗೆ ಉತ್ತರಿಸುತ್ತ ಹುಝೂರ್ ಅನ್ವರ್(ಅತಬಿಅ) ಹೇಳುದರು: ಒಬ್ಬ ಅಹ್ಮದಿ ಮುಸ್ಲಿಮ್ ಬಹಳ ಕಷ್ಟಪಡುವುದು ಬಹಳ ಮುಖ್ಯವಾಗಿದೆ. ಅಹ್ಮದೀಯರಲ್ಲದ ಮತ್ತು ಮುಸ್ಲಿಮೇತರರು ಕೂಡ ತುಂಬಾ ಕಷ್ಟಪಟ್ಟು ತಮ್ಮ ಸಂಶೋಧನೆಯ ಬಗ್ಗೆ ಯೋಚಿಸುತ್ತಾರೆ. ಅವರು ಒಂದು ಅಂಶದಲ್ಲಿ ದುರ್ಬಲರಾಗಿದ್ದಾರೆ ಮತ್ತು ಅವರು ಸರ್ವಶಕ್ತನಾದ ಅಲ್ಲಾಹನ ಸಹಾಯವನ್ನು ಪಡೆಯುವುದಿಲ್ಲ, ಹುಝೂರ್ ಅನ್ವರ್(ಅತಬಿಅ) ಮುಂದೆ ಹೇಳಿದರು: ಅಹ್ಮದಿ ಮುಸ್ಲಿಂ ಸಂಶೋಧಕರು ಇತರ ಸಂಶೋಧಕರಂತೆ ಬಹಳ ಆಳವಾಗಿ ಯೋಚಿಸಬೇಕು, ಆದರೆ ಅದೇ ಸಮಯದಲ್ಲಿ ಅವರು ತಮ್ಮ ಕೆಲಸಕ್ಕಾಗಿ ಹಾಗೂ ತಮ್ಮ ಸಂಶೋಧನೆಗಾಗಿ ಸರ್ವಶಕ್ತನಾದ ಅಲ್ಲಾಹನಲ್ಲಿ ದುಆ ಮಾಡಬೇಕು. ಅವರು ಮಾಡುತ್ತಿರುವ ಸಂಶೋಧನೆಯು ತುಂಬಾ ಪ್ರಯೋಜನಕಾರಿಯಾಗಲಿ, ಅದರಿಂದ ಇಡೀ ಮಾನವಕುಲಕ್ಕೆ ಪ್ರಯೋಜನವಾಗಲಿ ಮತ್ತು ಇಡೀ ಜಗತ್ತಿಗೆ ಉಪಯುಕ್ತವಾಗಲಿ ಮತ್ತು ತೌಹೀದ್ ಅನ್ನು ಸ್ಥಾಪಿಸಲಿ ಎಂದು ಪ್ರಾರ್ಥಿಸಬೇಕು.

ಮತ್ತೋರ್ವ ಖಾದಿಮ್ ಖಲೀಫರನ್ನು ಕನಸಿನಲ್ಲಿ ಕಂಡರೆ, ಅದನ್ನು ನಿಜವಾದ ಕನಸು ಎಂದು ಅರ್ಥೈಸಬಹುದೇ?

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಕನಸು ನಿಜವೋ ಸುಳ್ಳೋ ಗೊತ್ತಿಲ್ಲ, ಆದರೆ ಹೆಸರುಗಳನ್ನು ಅರ್ಥೈಸಲಾಗುತ್ತದೆ, ಖಲೀಫರ ಹೆಸರುಗಳು ಸಹ ಒಳ್ಳೆಯದು ಮತ್ತು ಒಳ್ಳೆಯ ಕನಸು ಇದೆ ಮತ್ತು ಅವರು ಒಳ್ಳೆಯ ವಿಷಯಗಳ ಬಗ್ಗೆ ಮಾತನಾಡುತ್ತಿದ್ದರೆ, ಅದು ನಿಜವಾದ ಕನಸು ಎಂದು ಸಂದರ್ಭದಿಂದ ತಿಳಿಯುತ್ತದೆ. ಕನಸಿನ ಹಿಂದಕ್ಕೆ ಮತ್ತು ಮುಂದಕ್ಕೆ ಏನಿದೆ? ವಿಭಿನ್ನ ಕನಸುಗಳು ವಿಭಿನ್ನ ವ್ಯಾಖ್ಯಾನಗಳನ್ನು ಹೊಂದಿರುತ್ತವೆ. ಒಂದೇ ಒಂದು ವಿಷಯವನ್ನು ನೋಡಿದರೆ ಸಾಕಾಗುವುದಿಲ್ಲ. ಕೆಲವು ಕನಸುಗಳಿವೆ, ಅವುಗಳ ವ್ಯಾಖ್ಯಾನವನ್ನು ಸಹ

ಹೆಸರುಗಳ ಪ್ರಕಾರ ಮಾಡಲಾಗುತ್ತದೆ. ಆ ಸಮಯದಲ್ಲಿ ಆಗುವ ಕೆಲವು ಸನ್ನಿವೇಶಗಳು ಕನಸಿನಲ್ಲಿ ಕಾಣುತ್ತವೆ, ಲೆಕ್ಕ ಹಾಕಲಾಗುತ್ತದೆ. ಈಗ ಯಾರಾದರೂ ನನಗೆ ಆ ಖಲೀಫರು ಕನಸ್ಸಿನಲ್ಲಿ ಕಾಣಿಸಿಕೊಂಡಿದ್ದಾರೆ ಅವರು ನನಗೆ ನಮಾಝ್ ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ ಎಂದು ಹೇಳಿ ನಮಾಝ್ ನಿರ್ವಹಿಸುವುದನ್ನು ನಿಲ್ಲಿಸಿದರೆ ಅದು ಅನುಮತಿಸುವುದಿಲ್ಲ.

ಒಂದು ತಮಾಷೆ ಇದೆ, ನಮ್ಮಲ್ಲಿ ಓರ್ವ ಹಿರಿಯರಿದ್ದರು ಅವರ ಓರ್ವ ಪುತ್ರನಿದ್ದ ಮತ್ತು ಅವನು ವೃದ್ಧಾಪ್ಯದಲ್ಲಿ ಹುಟ್ಟಿದ್ದನು. ಅವನು ನಮಾಝ್‌ಗಳನ್ನು ನಿರ್ವಹಿಸುವುದಲ್ಲಿ ಬಹಳ ಸೋಮಾರಿಯಾಗಿದ್ದನು. ಅವನ ತಂದೆ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದರು ಮತ್ತು ದೊಡ್ಡ ರಾಜಕೀಯ ಪಕ್ಷದ ಕುಟುಂಬಕ್ಕೆ ಸೇರಿದವರು. ಅವನ ಹೆಂಡತಿ ತೀರಿಕೊಂಡರು, ಅವನ ಮಗ ಅವನೊಂದಿಗೆ ವಾಸಿಸುತ್ತಿದ್ದನು. ಸರಿ, ಅವರು ತಮ್ಮ ಮಗನನ್ನು ರಬ್ವಾದಲ್ಲಿ ಶಿಕ್ಷಣ ಪಡೆಯಲು ಕರೆತಂದರು. ಒಂದು ದಿನ ಮಗ ಎಚ್ಚರಗೊಂಡು "ಅಪ್ಪಾ" ಎನ್ನುತ್ತಾನೆ. ಜಮಾಅತ್ತಿನ ದ್ವಿತೀಯ ಖಲೀಫರು ನನ್ನ ಕನಸಿನಲ್ಲಿ ಬಂದು ಹೇಳಿದರು: "ಮಗನೇ, ನಮಾಝ್ ನಿರ್ವಹಿಸಬೇಡ". ಅವರು ಹಿರಿಯ ವ್ಯಕ್ತಿ ಬಹಳ ಬುದ್ಧಿವಂತರಾಗಿದ್ದರು. ಅವರ ಹಾಸಿಗೆ ಬಾಗಿಲಿನ ಕಡೆಗೆ ಇತ್ತು ಮತ್ತು ಅವರ ಮಗನ ಹಾಸಿಗೆ ಗೋಡೆಯ ಕಡೆಗೆ ಇತ್ತು. ಆದ್ದರಿಂದ ಅವರು ಹೇಳುತ್ತಾರೆ, "ಮಗನೇ, ನನ್ನ ಹಾಸಿಗೆಯನ್ನು ದಾಟಿ ಬಂದು ನಿನಗೆ ಹೇಳಿದವರು ನನಗೇಕೆ ಹೇಳಲಿಲ್ಲ? ಅವರು ನಮಾಝ್ ಅನ್ನು ನಿರ್ವಹಿಸಬೇಡ ಎಂದು ಹೇಳಲು ನನ್ನ ಹಾಸಿಗೆ ದಾಟಿ ನಿನ್ನ ಬಳಿ ಬಂದು ಹೇಳಿದ್ದಾರೆಯೇ. ಹೀಗೆ ಇಂತಹ ವಿಷಯಗಳು ಕನಸು ಮಾಡಲ್ಪಟ್ಟಿದೆಯೇ? ಅಥವಾ ನಿಜವಾದ ಕನಸೇ? ಎಂಬುದು ಸಂದರ್ಭೋಚಿತವಾಗೊರುತ್ತದೆ.

ಈ ಸಭೆಯ ಕೊನೆಯಲ್ಲಿ ಹುಝೂರ್ ಅನ್ವರ್(ಅತಬಿಅ) ಹೇಳಿದರು: "ಅಧ್ಯಕ್ಷರೇ!! ಸಮಯ ಮುಗಿದಿದೆ, ಮತ್ತು ಮಾಶಾ ಅಲ್ಲಾಹ್, ಎಲ್ಲಾ ಮಳೆಯನ್ನು ಸಹ ಎಲ್ಲಾಹ್ ಯುವಕರು ತಮ್ಮ ಮೇಲೆ ತೆಗೆದುಕೊಂಡಿದ್ದಾರೆ". ನಾನು ನೋಡಿದ್ದೇನೆ, ಮಾಶಾ ಅಲ್ಲಾಹ್, ನಿಮ್ಮ ಖುದ್ದಾಮ್‌ಗಳಲ್ಲಿ ತಾಳ್ಮೆ ಮತ್ತು ಧೈರ್ಯವಿದೆ. ಕನಿಷ್ಠ ಮಳೆಯನ್ನು ಸಹಿಸಿಕೊಳ್ಳುವಷ್ಟು ಶಕ್ತಿ ಅವರಲ್ಲಿದೆ, ಸರ್ವಶಕ್ತನಾದ ಅಲ್ಲಾಹನು ಅವರಿಗೆ ಹೆಚ್ಚಿನ ಸಹಿಷ್ಣುತೆ ಮತ್ತು ಶಕ್ತಿಯನ್ನು ನೀಡಲಿ, ಮತ್ತು ಅವರು ನಿಜವಾಗಿ ಧರ್ಮದ ಸೇವಕರಾಗಲಿ ಮತ್ತು ಅವರ ಗುರಿಯನ್ನು ಸಾಧಿಸಲಿ, ಇದು ಖುದಾಮ್ ಅಲ್-ಅಹ್ಮದಿಯಾ ಅವರ ಗುರಿಯಾಗಿದೆ ಮತ್ತು ಯಾವಾಗಲೂ ಧರ್ಮವನ್ನು ಪ್ರಪಂಚದ ಮೇಲೆ ಆದ್ಯತೆ ನೀಡುವೆವು ಎಂಬ ಪ್ರತಿಜ್ಞೆ ಮಾಡುವವರು. ಅವರು ಅನುಸರಿಸುವವರಾಗಲಿ ಮತ್ತು ಅವರು ಖಿಲಾಫತ್ ಅನ್ನು ರಕ್ಷಿಸುವವರಾಗಲಿ ಮತ್ತು ಅವರ ಧಾರ್ಮಿಕ ಜ್ಞಾನವನ್ನು ಹೆಚ್ಚಿಸಲು ಮತ್ತು ಅವರ ದೇಶದಲ್ಲಿ ಇಸ್ಲಾಂ ಮತ್ತು ಅಹ್ಮದೀಯ ಸಂದೇಶವನ್ನು ಹರಡಲು ಅವರ ಎಲ್ಲಾ ಸಾಮರ್ಥ್ಯಗಳೊಂದಿಗೆ ಪ್ರಯತ್ನಿಸುವವರಾಗಲಿ. ಅಲ್ಲಾಹನು ನಿಮ್ಮೆಲ್ಲರಿಗೂ ತೌಫಿಕ್ ನೀಡಲಿ. (ಆಮೇನ್)

**(ಅಲ್-ಫಝಲ್ ಇಂಟರ್‌ನ್ಯಾಶನಲ್, ಸೆಪ್ಟೆಂಬರ್ 10, 2021)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್**.

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**MUSLIM TELEVISION AHMADIYYA INTERNATIONAL**

**www.mta.tv**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯುಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ R ¢ Ai ÀÁ¤ (ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಒಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 2.5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಷವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**

**Mob or whatsapp: 9902678609**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 11 August 2022, Issue No. 32

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 31ರ ಉಳಿದ ಭಾಗ)**

150 ಕ್ಕಿಂತ ಹೆಚ್ಚು ಅತಿಥಿಗಳು vechta ಮಸೀದಿಯ ಉದ್ಘಾಟನದಲ್ಲಿ ಪಾಲ್ಗೊಂಡಿದ್ದರು. ಈ ಮಸೀದಿಯ ಹೆಸರು **"ಬೈತುಲ್ ಖಾದಿರ್",** ಅಂದರೆ ಅಲ್ಲಾಹನ ಮನೆ ಎಂದಾಗಿದೆ. ಅಹ್ಮದಿ ಮುಸಲ್ಮಾನರು ಈ ದಿನಕ್ಕಾಗಿ ಕಾದು ಕುಳಿತಿದ್ದರು. ಅವರುಗಳು ಘೋಷಣೆಗಳೊಂದಿಗೆ ಮಿರ್ಝಾ ಮಸ್ರೂರ್ ಅಹ್ಮದ್ ಅವರಿಗೆ ಸ್ವಾಗತ ಕೋರುತ್ತಿದ್ದರು. ಬಾಲಕರು ಗೀತೆಗಳನ್ನು ಹಾಡುತ್ತಿದ್ದರು. ಜೊತೆಯಲ್ಲಿ ಧ್ವಜಗಳನ್ನು ಹಾರಿಸುತ್ತಿದ್ದರು. ಖಲೀಫತುಲ್ ಮಸೀಹ್ ಮಸೀದಿಯ ಹೊರಗೋಡೆಯಲ್ಲಿ ಸ್ಥಾಪಿತಗೊಂಡ ಹಲಗೆಯಿಂದ ಪರದೆಯನ್ನು ಅನಾವರಣ ಮಾಡುತ್ತಿದ್ದಾರೆ. ಈ ಹಲಗೆಯ ಮೇಲೆ **"ಮಸ್ಜಿದ್ ಬೈತುಲ್ ಖಾದಿರ್** ಎಂದು ಬರೆಯಲಾಗಿದೆ. ಅದರ ಅರ್ಥ **"ಸಮರ್ಥ ದೇವನ ಮನೆ"** ಅನಂತರ ಖಲೀಫರು ನಮಾಝ್ ನಿರ್ವಹಿಸಲು ಮಸೀದಿಗೆ ತೆರಳಿದರು.

ಖಲೀಫತುಲ್ ಮಸೀಹ್ ಅವರ ಉಪಸ್ಥಿತಿಯು ಅ ಮಸೀದಿಯ ಉದ್ಘಾಟಿಸುವ ಮಹತ್ವ ಸಾರುವಂತಿತ್ತು. ಹಝ್ರತ್ ಮಿರ್ಝಾ ಮಸ್ರೂರ್ ಅವರಿಗೆ 150 ಅತಿಥಿಗಳನ್ನು ಅದರಲ್ಲಿ ರಾಜಕಾರಣಕ್ಕೆ ಸಂಬಂಧಪಟ್ಟವರು, ಚರ್ಚ್ ಇತ್ಯಾದಿಗೆ ಸಂಬಂಧಪಟ್ಟವರು ಸೇರಿದ್ದನ್ನು ನೋಡಿ ತುಂಬಾ ಸಂತೋಷಪಟ್ಟರು. ಅವರು ಹೇಳಿದರು. ನೀವುಗಳು ಅಹ್ಮದಿ ಅಲ್ಲದಿದ್ದರೂ ಇಲ್ಲಿ ಆಗಮಿಸಿದ್ದು ತಮ್ಮ ಸಹೋದರತೆಯನ್ನು ತಿಳಿದು ಬರುತ್ತದೆ.

ಅಹ್ಮದಿ ಸದಸ್ಯರಿಗೆ ಅವರು ಮೊದಲಿಗಿಂತ ಹೆಚ್ಚು ಸಮಾಜದ ಪ್ರಗತಿಗಾಗಿ ದುಡಿಯುವಂತೆ ಗಮನ ಸೆಳೆದರು. ಖಲೀಫತುಲ್ ಮಸೀಹ್ ತನ್ನ ಭಾಷಣದಲ್ಲಿ ಹೇಳಿದರು. ನೀವು ಪ್ರಗತಿಯಲ್ಲಿ ಕೈ ಜೋಡಿಸಲಿಲ್ಲ ಎಂದರೆ ಅದರ ಅರ್ಥ ನೀವು ಐಕ್ಯತೆ ಸಾದಿಸಲಿಲ್ಲ ಎಂದಾಗುತ್ತದೆ. ಈ ದೇಶದೊಂದಿಗೆ ನಿಷ್ಠೆ ಹೊಂದುವುದು ನಿಮ್ಮ ಧರ್ಮದ ಭಾಗವಾಗಿದೆ.

ಖಲೀಫತುಲ್ ಮಸೀಹ್ ಧರ್ಮ ಧರ್ಮಗಳ ಮಧ್ಯೆ ಪ್ರೀತಿ ಮತ್ತು ಸಹೋದರತೆಯಿಮದ ವರ್ತಿಸಲು ಉಪದೇಶ ಮಾಡಿದರು. ಅವರು ಹೇಳಿದರು. ಎಲ್ಲ ಧರ್ಮಗಳು ಪ್ರೀತಿ ಮತ್ತು ಸ್ನೇಹದ ಶಿಕ್ಷಣವೇ ಹೊಂದಿವೆ. ಆದರೆ ಮನುಷ್ಯರೇ ಅದನ್ನೂ ಹಾಳುಗೆಡವಿದ್ದಾರೆ. ನಾವು ಕಲ್ಲುಗಳಿಂದ ಮಸೀದಿಯಂತೂ ಕಟ್ಟಿದ್ದೇವೆ. ಆದರೆ ನಮ್ಮ ಹೃದಯಗಳು ಕಲ್ಲಿನಂತೆ ಕಠಿಣವಾಗಿರಬಾರದು.

ನಗರದ ಮೇಯರ್ Claus Deling halls ಮತ್ತು MPA Dr. Stephan Siemen ಅವರುಗಳು ಸಹ ಈ ಉದ್ಘಾಟನೆಯ ಕುರಿತು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಈ ಸಮಾಚಾರದೊಂದಿಗೆಯೂ ಹುಝೂರೆ ಅನ್ವರ್ ಅವರ ಚಿತ್ರ ಪ್ರಕಟಿಸಲಾಗಿತ್ತು. ಅದರಲ್ಲಿ ಹುಝೂರ್ ದುಆ (ಪ್ರಾರ್ಥನೆ) ಮಾಡಿಸುತ್ತಿದ್ದರು.ಈ ಸಮಾಚಾರ ಪತ್ರಿಕೆಯು ದಿನಪತ್ರಿಕೆಯಾಗಿದೆ. ಅದರ circulation ಸಂಖ್ಯೆ 21,306 ಆಗಿರುತ್ತದೆ.

* Osnabmuker Zeitung ಪತ್ರಿಕೆ ತನ್ನ 9 ಜೂನ್ 2015 ರ ಪ್ರಸಾರದಲ್ಲಿ ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನೆ ಸುದ್ದಿ ನೀಡುತ್ತಾ ಬರೆದಿದೆ.

ಅಹ್ಮದಿ ಸದಸ್ಯರಿಗೆ ಅವರು ಮೊದಲಿಗಿಂತ ಹೆಚ್ಚು ಸಮಾಜದ ಪ್ರಗತಿಗಾಗಿ ದುಡಿಯುವಂತೆ ಗಮನ ಸೆಳೆದರು. ಖಲೀಫತುಲ್ ಮಸೀಹ್ ತನ್ನ ಭಾಷಣದಲ್ಲಿ ಹೇಳಿದರು. ನೀವು ಪ್ರಗತಿಯಲ್ಲಿ ಕೈ ಜೋಡಿಸಲಿಲ್ಲ ಎಂದರೆ ಅದರ ಅರ್ಥ ನೀವು ಐಕ್ಯತೆ ಸಾದಿಸಲಿಲ್ಲ ಎಂದಾಗುತ್ತದೆ. ಈ ದೇಶದೊಂದಿಗೆ ನಿಷ್ಠೆ ಹೊಂದುವುದು ನಿಮ್ಮ ಧರ್ಮದ ಭಾಗವಾಗಿದೆ.

ಖಲೀಫತುಲ್ ಮಸೀಹ್ ಧರ್ಮ ಧರ್ಮಗಳ ಮಧ್ಯೆ ಪ್ರೀತಿ ಮತ್ತು ಸಹೋದರತೆಯಿಂದ ವರ್ತಿಸಲು ಉಪದೇಶ ಮಾಡಿದರು. ಅವರು ಹೇಳಿದರು. ಎಲ್ಲ ಧರ್ಮಗಳು ಪ್ರೀತಿ ಮತ್ತು ಸ್ನೇಹದ ಶಿಕ್ಷಣವೇ ಹೊಂದಿವೆ. ಆದರೆ ಮನುಷ್ಯರೇ ಅದನ್ನೂ ಹಾಳುಗೆಡವಿದ್ದಾರೆ. ನಾವು ಕಲ್ಲುಗಳಿಂದ ಮಸೀದಿಯಂತೂ ಕಟ್ಟಿದ್ದೇವೆ. ಆದರೆ ನಮ್ಮ ಹೃದಯಗಳು ಕಲ್ಲಿನಂತೆ ಕಠಿಣವಾಗಿರಬಾರದು.

ನಗರದ ಮೇಯರ್ Claus Deling halls ಮತ್ತು MPA Dr. Stephan Siemen ಅವರುಗಳು ಸಹ ಈ ಉದ್ಘಾಟನೆಯ ಕುರಿತು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಈ ಸಮಾಚಾರದೊಂದಿಗೆ ಹುಝೂರೆ ಅನ್ವರ್ ಅವರ ದುಆ (ಪ್ರಾರ್ಥನೆ) ಮಾಡಿಸುತ್ತಿದ್ದ ಚಿತ್ರ ಪ್ರಕಟಿಸಲಾಗಿತ್ತು.

ಈ ಸಮಾಚಾರ ಪತ್ರಿಕೆಯು ದಿನಪತ್ರಿಕೆಯಾಗಿದೆ. ಅದರ circulation ಸಂಖ್ಯೆ 21,306 ಆಗಿರುತ್ತದೆ.

* Osnabmuker Zeitung ಪತ್ರಿಕೆ ತನ್ನ 9 ಜೂನ್ 2015 ರ ಪ್ರಸಾರದಲ್ಲಿ ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನೆ ಸುದ್ದಿ ನೀಡುತ್ತಾ ಬರೆದಿದ್ದಾರೆ.

Niedemsachsen ನಲ್ಲಿ ಮುಸ್ಲಿಂ ಜಮಾಅತ್ ಒಂದು ಹೊಸ ಮಸೀದಿಯನ್ನು ಉದ್ಘಾಟಿಸಿದೆ. ಈ ಅಹ್ಮದಿಯಾ ಮುಸ್ಲಿಂ ಜಮಾಅತಿನ ಕಟ್ಟಡಕ್ಕೆ ಎರಡು ಎತ್ತರವಾದ ಗೋಪುರಗಳಿವೆ ಮತ್ತು ಒಂದು ಗುಂಬಜ್ ಇದೆ.

ಈ ಸಂತಸದ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಆಧ್ಯಾತ್ಮಿಕ ನೇತಾರರಾದ ಮಿರ್ಝಾ ಮಸ್ರೂರ್ ಅಹ್ಮದ್ ರವರು ಸಹ ಭಾಗವಹಿಸಿದ್ದರು. ಜರ್ಮನಿಯಾದ್ಯಂತ ಈ ಜಮಾಅತಿನ 47 ಮಸೀದಿಗಳು ಮತ್ತು 37 ಸಾವಿರ ಸದಸ್ಯರಿದ್ದಾರೆ. Niedensachsen ನ ರಾಜ್ಯದಲ್ಲಿ ಅವರ ಮಸೀದಿಗಳು State, osnabruck, Hannover, bremen ನಲ್ಲಿವೆ.

ಅಹ್ಮದಿಯಾ ಮುಸ್ಲಿಂ ಜಮಾಅತ್ ತನ್ನನ್ನು ಒಂದು ಸುದಾರಕ ಇಸ್ಲಾಮಿ ಸಂಸ್ಥೆ ಎಂದು ಪರಿಗಣಿಸುತ್ತದೆ. 1889 ರಲ್ಲಿ ಈ ಜಮಾಅತಿನ ಬುನಾದಿ ಭಾರತದಲ್ಲಿ ಸ್ಥಾಪಿತವಾಯಿತು.

Vechta ನಗರದ Deputy Mayor ಹೇಳಿದರು. ಪರಸ್ಪರ ಗೌರವ ಸಮಾನತೆ ಮತ್ತು ಉದಾರತೆಯಿಂದ ವರ್ತಿಸುವವರಾದರೆ ಎಲ್ಲ ದ್ವೇಷಗಳನ್ನು ಹೋಗಲಾಡಿಸಬಹುದಾಗಿದೆ. ಎಲ್ಲರೂ ಅದೇ ರೀತಿ ಶಾಂತಿಯಿಂದ ಒಗ್ಗಟ್ಟಾಗಿ ಇರಬಹುದಾಗಿದೆ.

(Osnabrucken zeitung ) ಪತ್ರಿಕೆಯು ದಿನಪತ್ರಿಕೆಯಾಗಿದೆ. 1,59,510 ಇದರ circulation ಸಂಖ್ಯೆ ಆಗಿದೆ).

ಅದೇ ರೀತಿ Iserlohn ರ ಮಸೀದಿ ಬೈತುಸ್ಸಲಾಂ ಅಡಿಗಲ್ಲು ಸಂದರ್ಭದಲ್ಲಿ WDR ತನ್ನ ವೆಬ್‌ಸೈಟ್‌ನ್ಲಿ ಸುದ್ದಿ ಬಿತ್ತರಿಸಿತು. WDR ರಾಜ್ಯದಲ್ಲಿರುವ ಬಹಳ ಪುರಾತನವಾದ ಮತ್ತು ಆ ರಾಜ್ಯದ ಪ್ರಮುಖ ದೂರದರ್ಶನವಾಗಿದೆ. 1958 ರಿಂದ ಈ ಚಾನಲ್ ನಡೆದು ಬಂದಿದೆ. ಈ ಚಾನಲ್ ಸುದ್ದಿ ಹೀಗೆ ಪ್ರಕಟಿಸಿತು.

"ಮಂಗಳವಾರ ದಿನ Iserlohn ವಲ್ಲ ಮಸೀದಿಯ ಅಡಿಗಲ್ಲು ಹಾಕಲಾಯಿತು. ಅದು ಅಹ್ಮದಿಯಾ ಮುಸ್ಲಿಂ ಜಮಾಅತಿನ ಮಸೀದಿಯಾಗಿದೆ. ಈ ಮಸೀದಿಯ ಗುಮ್ಮಟದ ವಿಸ್ತೀರ್ಣ 8 ಮೀಟರ್ ಇರಬಹುದು. ಅದರ ಗೋಪುರ 12 ಮೀಟರ್ ನಷ್ಟಿರಬಹುದು. ಈ ಮಸೀದಿಯ ಅಡಿಗಲ್ಲು ಸಮಾರಂಭದಿಂದ ಜಮಾಅತಿನ ಸದಸ್ಯರು ತುಂಬಾ ಸಂಭ್ರಮಿಸುತ್ತಿದ್ದಾರೆ.

2010 ರಲ್ಲಿ ಅಹ್ಮದಿಯಾ ಜಮಾಅತ್ ಜರ್ಮನಿ ಮಸೀದಿ ನಿರ್ಮಾಣಕ್ಕಾಗಿ ಅರ್ಜಿ ಕೊಟ್ಟಿದ್ದರು. ಆಗ ವಿರೋಧ ವ್ಯಕ್ತವಾಯಿತು. ಆದರೆ ವಿರೋಧಿಸುವವರ ಸಂಖ್ಯೆ ಕಡಿಮೆ ಇತ್ತು. ನ್ಯಾಯಾಲಯ ಹತ್ತಲು ಸಹ ಪ್ರಯತ್ನ ಮಾಡಿದರು. ಆದರೆ ಅದನ್ನು ರದ್ದು ಮಾಡಲಾಯಿತು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.